EXCEL public school

# EXCELSIOR

*Ever Upward*

ಕನ್ನಡ ವಿಶೇಷ ಸಂಚಿಕೆ







**ಕರುನಾಡ ತಾಯಿಯ ಕಂದರೇ ನಾವು**
**ಕನ್ನಡಮ್ಮನ ಸೇವೆಯ ಮಾಡುವೆವು**
**ಅನ್ನವನೀಯುವ ಮಣ್ಣಿನ ಋಣವನು**
**ತೀರಿಸಲೆಂದೇ ನಿಂತಿಹೆವು**

ಕನ್ನಡ ಭಾಷೆಯು ಸರಳವೂ, ಸುಂದರವೂ, ಸುಮಧುರವೂ ಆಗಿ ಎಲ್ಲರ ಬಾಯಿಯಲ್ಲಿ ಬಹುಬೇಗನೇ ಹರಿದಾಡುವುದು. ಅಂತಹ ಮಧುರ ಕನ್ನಡ ಭಾಷೆಯ ಸವಿಯನ್ನು ಸವಿಯುತಿಹ ನಾವು ನಿಜವಾಗಿಯೂ ಭಾಗ್ಯವಂತರೇ ಸರಿ.

ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯು ಕೂಡ ಕನ್ನಡಮ್ಮನ ಸೇವೆಯನ್ನು ಮಾಡುತ್ತ ಬರುತ್ತಿರುವುದು ನಮಗೆ ಹೆಮ್ಮೆಯ ವಿಚಾರ. ಕರುನಾಡು, ಕನ್ನಡ ಭಾಷೆಗೆ ನಮ್ಮ ಶಾಲೆಯು ಮೊದಲ ಆದ್ಯತೆ ನೀಡುವುದು. "ಎಲ್ಲೆ ಇರು ಹೇಗೆ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ತತ್ತ್ವವನ್ನು ಸಾರುವ ಸೇವಕರಾಗಿ, ಕನ್ನಡ ನೆಲದಲ್ಲಿ ಎಲ್ಲರ ಬಾಯಿಯಲ್ಲಿಯೂ ಕನ್ನಡ ಸಿರಿನುಡಿ ಧಾರೆಯನ್ನು ಹರಿಸುತ್ತಿರುವುದು ಹಾಗು ಕನ್ನಡ ನಮ್ಮ ಭಾಷೆ, ನಮ್ಮ ನಾಡ ಭಾಷೆ ಅದನ್ನು ಸರ್ವರೂ ಕಲಿಯುವುದು ಆದ್ಯ ಕರ್ತವ್ಯವೆಂದೇ ಸಾರಿ ಹೇಳುತ್ತದೆ.

ಶಿಶುವಿಹಾರದಿಂದ, ಹತ್ತನೆಯ ತರಗತಿಯವರೆಗೂ ಕನ್ನಡವನ್ನು ಕಲಿಯಲೇಬೇಕಾದ ನಿಯಮಾವಳಿಯೊಂದಿಗೆ ಕನ್ನಡವನ್ನು ಪ್ರೀತಿಯಿಂದ ಕಲಿಯುವಂತೆ, ಕಲಿಸುವಂತೆ ಎಲ್ಲ ರೀತಿಯಲ್ಲಿಯೂ ನಮ್ಮ ಶಾಲೆ ಹಾಗೂ ಪೋಷಕವರ್ಗದವರು ಸಹಕರಿಸುತ್ತಿದ್ದಾರೆ. ಇದು ಕನ್ನಡ ವಿಭಾಗದ ಶಿಕ್ಷಕರಾದ ನಮ್ಮೆಲ್ಲರಿಗೂ ಒಂದು ಸಂತಸದ ವಿಚಾರವೇ ಸರಿ.

ಕನ್ನಡದ ನುಡಿಮುತ್ತುಗಳು ಕನ್ನಡೇತರ ವಿದ್ಯಾರ್ಥಿಗಳ ಬಾಯಿಯಲ್ಲಿಯೂ ಸುಲಲಿತವಾಗಿ ಹರಿಯುವುದನ್ನು ಕಂಡಾಗ "ಕನ್ನಡ ತಾಯಿಯೇ ನೋಡು ನೀ, ನಮ್ಮ ಶಾಲೆಯ ವಿದ್ಯಾರ್ಥಿಗಳ, ನೀನಿನ್ನು ನಿಂತ ನೀರಲ್ಲ ಸದಾ ಹರಿಯುವ ಅಮರ ಪ್ರೇಮದ ಒರತೆಯೆಂದೇ" ಭರವಸೆಯ ವಚನವನೀಯಲು ನಮಗೆ ಸಾಕ್ಷಿಯಾಗುತ್ತದೆ.

ನಮ್ಮ ಶಾಲೆಯು ಇರುವವರೆಗೂ ಕನ್ನಡ ನಾಡು ನುಡಿಯ ಸಿರಿಗೆ ಎಂದಿಗೂ ಪರ್ವವೇ. ಇದಕ್ಕೆ ಸಾಕ್ಷಿಯಾಗುವಂತೆ ನವೆಂಬರ್ 3ನೆಯ ತಾರೀಖಿನಂದು ನಡೆದ ವಿಜ್ರಂಭಣೆಯ ಕನ್ನಡ ರಾಜ್ಯೋತ್ಸವ. ಕನ್ನಡ ನಾಡು ನುಡಿಯ ಬಗ್ಗೆ ನಮ್ಮ ವಿದ್ಯಾರ್ಥಿಗಳಿಗೆ ಇರುವ ಪ್ರೀತಿಯು ಈ ನಮ್ಮ ಕನ್ನಡ ವಿಶೇಷ ಸಂಚಿಕೆಯಲ್ಲಿ ವ್ಯಕ್ತವಾಗಿದೆ. ಈ ಸಂಚಿಕೆಯನ್ನು ಸಮಸ್ತ ಕನ್ನಡ ಕುಲಕೋಟಿಗೆ ಸಮರ್ಪಿಸುತ್ತೇವೆ.

**ಕನ್ನಡ ವಿಭಾಗ**

# ಜನಪದ ಸಿರಿ

ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ಈ ಬಾರಿ 63ನೆ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದೆವು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಪಿ ಕೆ ರಾಜಶೇಖರ ಅವರು ಆಗಮಿಸಿದ್ದರು. ಜೊತೆಗೆ ಈ ಕಾರ್ಯಕ್ರಮದಲ್ಲಿ ನಮ್ಮ ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯು ಕೆ ಜಿ ರವರು, ಹಾಗೂ ಸಂಪರ್ಕಾಧಿಕಾರಿಗಳಾದ ಶ್ರೀಯುತ ಹೆಚ್ ಎಂ ಪ್ರಶಾಂತ್ ರವರು ವೇದಿಕೆಯಲ್ಲಿ ಹಾಜರಿದ್ದರು. ಶ್ರೀಮತಿ ಶಾಂತಲಾ ಎಂ ರಾವ್‌ರವರು ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು. ಸಭೆಗೆ ಸ್ವಾಗತವನ್ನು ಶ್ರೀಯುತ ಗಣೇಶ್ ಭಟ್‌ರವರು ಕೋರಿದರು. ಅತಿಥಿಗಳ ಪರಿಚಯವನ್ನು ಶ್ರೀಮತಿ ಜಯಂತಿಯವರು ಮಾಡಿಕೊಟ್ಟರು. ಕೊನೆಯಲ್ಲಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀಮತಿ ಸ್ವರ್ಣಾ ಎಸ್ ರವರು ಮಾಡಿದರು. ನಮ್ಮ ಶಾಲೆಯಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ನಿಹಾರಿಕಾ ಚಂದನ್ ಎಂಬ ವಿದ್ಯಾರ್ಥಿನಿ ಕನ್ನಡ ನಾಡನ್ನು ಆಳಿದ ರಾಜವಂಶಸ್ಥರ ಬಗ್ಗೆ, ಅವರು ಕನ್ನಡ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಬಗ್ಗೆ ಹೇಳಿದ್ದನ್ನು ಕೇಳಿ ಎಲ್ಲರೂ ಸಂತೋಷಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದಂತಹ ಡಾ. ಪಿ ಕೆ ರಾಜಶೇಖರ ರವರು ನಮ್ಮ ಶಾಲೆಯಲ್ಲಿ ಕನ್ನಡ ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿ ಅಳವಡಿಸಿಕೊಂಡು ಬೋಧಿಸುತ್ತಿರುವುದಕ್ಕಾಗಿ ಮತ್ತು ಕನ್ನಡ ಭಾಷೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕನ್ನಡ ನಾಡಿನ ಸಂಸ್ಕೃತಿ, ಸಾಹಿತ್ಯ, ಇತಿಹಾಸಗಳ ಬಗ್ಗೆ ಸರಳವಾದ ರೀತಿಯಲ್ಲಿ ವಿವರಿಸಿದರು. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಪ್ರತಿಯೊಬ್ಬ ತಾಯಿಯು ತಮ್ಮ ಮಕ್ಕಳಿಗೆ ಪ್ರೋತ್ಸಾಹಿಸಬೇಕೆಂಬುದನ್ನು ತಮ್ಮ ಭಾವನೆಗಳೊಂದಿಗೆ ವ್ಯಕ್ತ ಪಡಿಸಿದರು. ಜನಪದಗೀತೆಯೊಂದನ್ನು ತಮ್ಮದೇ ಆದ ಶೈಲಿಯಲ್ಲಿ ಹಾಡಿ ಎಲ್ಲರ ಮನರಂಜಿಸಿದರು.

ಈ ಕಾರ್ಯಕ್ರಮದ ಮುಖ್ಯ ಆಕರ್ಷಣೆ ಸಾಂಸ್ಕೃತಿಕ ಕಾರ್ಯಕ್ರಮ. ನಮ್ಮ ಶಾಲೆಯ ವಿದ್ಯಾರ್ಥಿಗಳಾದಂತಹ ತೇಜಸ್ ಎಸ್ ಬಾಡಾಲ ವಿಕ್ರಮ ರಾಜನ ವೇಷಧಾರಿಯಾಗಿ ಮತ್ತು ನಿಖಿಲ್ ಬೇತಾಳ ವೇಷವನ್ನು ಧರಿಸಿ ನಿರೂಪಣೆ ಮಾಡುವ ಮುಖೇನ ಎಲ್ಲಾ ವೀಕ್ಷಕರ ಗಮನ ಸೆಳೆದರು. ಕಾರ್ಯಕ್ರಮದ ಸಿದ್ಧತೆಯು ಕೇವಲ 7 ದಿನಗಳಲ್ಲಿ ನಡೆದಿರುತ್ತಾದರೂ ಬಹಳ ಉತ್ತಮವಾಗಿ ಮೂಡಿ ಬಂತು. ಒಟ್ಟು 12 ಕಾರ್ಯಕ್ರಮಗಳಿದ್ದು ಒಂದಕ್ಕಿಂತ ಒಂದು ಅದ್ಭುತವಾಗಿತ್ತು. ಕೊಡಗಿನ ಸಂಸ್ಕೃತಿ, ಮಾರಿಕುಣಿತ, ಕಂಸಾಳೆ, ತುಳುನಾಡಿನ ವೈಭವ, ಜನಪದ ಲೋಕದ ವೈಭವವನ್ನು ಸಾರಿ ಹೇಳುವಂತಹ ಹಾಡುಗಳು, ನೃತ್ಯಗಳು ಮತ್ತು ಹಳ್ಳಿಯ ಜೀವನವನ್ನು ಕುರಿತಂಥಹ ನಾಟಕವು ಜನಮಾನಸದಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸಬೇಕಾದ ಅಗತ್ಯವನ್ನು ಅದರ ಅಳಿವು–ಉಳಿವಿಗೆ ನಾವೇ ಕಾರಣ ಎಂಬುದನ್ನು ಮನವರಿಕೆ ಮಾಡಿಕೊಡುವುದರ ಜೊತೆಯಲ್ಲಿ ಎಲ್ಲಾ ವೀಕ್ಷಕರ ಮನಸೂರೆಗೊಂಡಿತು.

# ಸಂಸ್ಕೃತಿಯನ್ನು ಉಳಿಸುವ ನುಡಿಸಿರಿ

ಈ ಆಸ್ಥಾನವನ್ನು ನೋಡಿದಾಗ ಕುಬೇರನ ಆಸ್ಥಾನ ನೆನಪಾಗುತ್ತಿದೆ. ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿರುವ ಆಡಳಿತ ಮಂಡಳಿಯವರಿಗೆ ಮತ್ತು ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯೂ ಕೆ ಜಿ ಯವರಿಗೆ ನಮಸ್ಕರಿಸುತ್ತ ತಮ್ಮೆಲ್ಲರ ಅಪ್ಪಣೆಯ ಮೇರೆಗೆ ನನ್ನೆರಡು ಮಾತುಗಳನ್ನು ಹಂಚಿಕೊಳ್ಳುತ್ತೇನೆ.

ನಾವು ಮಾತನಾಡುವ ವಿಷಯ ಇನ್ನೊಬ್ಬರಿಗೆ ಅರ್ಥವಾಗದಿದ್ದರೆ ಅದು ಯಾವುದೇ ಪ್ರಯೋಜನಕ್ಕೆ ಬರುವುದಿಲ್ಲ. ಹಾಗಾಗಿ ಜನತೆಯ ಭಾಷೆಯನ್ನು ಬಳಸಿ ಮಾತನಾಡುತ್ತೇನೆ. ಕನ್ನಡ ಭಾಷೆ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ ಅಲ್ಲದೆ ಇದು ಜನಸಾಮಾನ್ಯರ ಭಾಷೆಯೂ ಆಗಿರುವುದರಿಂದ ಈ ಭಾಷೆಯನ್ನು ಉಳಿಸಿಕೊಳ್ಳಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇವೆಯೆ ಹೊರತು ಕೇವಲ ಭಾಷೆಯ ಮೇಲಿನ ದುರಭಿಮಾನದಿಂದ ಕನ್ನಡ ಕನ್ನಡ ಎಂದು ಹೇಳುತ್ತಿಲ್ಲ.


**ಡಾ. ಪಿ ಕೆ ರಾಜಶೇಖರ್**
ಜಾನಪದ ವಿದ್ವಾಂಸರು ಮತ್ತು
ವಿಶ್ರಾಂತ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು.



**"ಜಾಗತೀಕರಣದಿಂದ ನಮ್ಮ ಕನ್ನಡ ಭಾಷೆ ನಾಶವಾಗುವ ಹಂತವನ್ನು ತಲುಪಿದೆ. ಇದನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಹೆಗಲಿಗೆ ಬಿದ್ದಿದೆ. ಯಾವ ತಾಯಿ ತನ್ನ ಮನೆಯಲ್ಲಿ ಕನ್ನಡವನ್ನು ಮಾತನಾಡುತ್ತಾಳೋ ಅಂತಹ ಮನೆಯ ಮಕ್ಕಳು ಮಾತ್ರ ಕನ್ನಡದ ಮಕ್ಕಳಾಗಿ ಬೆಳೆಯಲು ಸಾಧ್ಯ".**

ಕನ್ನಡ ಅತ್ಯಂತ ಪ್ರಾಚೀನ ಭಾಷೆಯಾಗಿದೆ ಎಂಬುದಕ್ಕೆ ಅನೇಕ ಪುರಾವೆಗಳಿವೆ.
ಫಾ. ಹೆರಾಸ್ ಸಿಂಧೂ ಕಣಿವೆ ನಾಗರಿಕತೆಯ ಕುರಿತು ಹೇಳುವಾಗ ಕನ್ನರ್–ಕಳ್ಳರ್–ಕನ್ನಡಿಗರ್ ಎಂದು ಉಲ್ಲೇಖಿಸಿದ್ದಾರೆ. ಕನ್ನಡ ನಾಡು ಉಜ್ವಲ ಇತಿಹಾಸವನ್ನು ಹೊಂದಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಟಾಲಮಿಯ 'ಭೂಗೋಳ' ಗ್ರಂಥದಲ್ಲಿ ಕರ್ನಾಟಕದ ಹೆಸರುಗಳಾದ ಇಂಡಿ, ಹಿಪ್ಪರಿಗೆ, ಕಲಕೇರಿ ಮತ್ತು ಮುದೊಗಲ್ಲ ಎಂಬ ಹೆಸರುಗಳು ಉಲ್ಲೇಖಗೊಂಡಿವೆ. ಅಲ್ಲದೆ ಕನ್ನಡ ಪದಗಳು ಗ್ರೀಕ್ ಭಾಷೆಗೆ ಎರವಲಾಗಿ ಹೋಗಿದ್ದು ನಂತರ ಇಂಗ್ಲಿಷ್ ಭಾಷೆಯ ಮೂಲಕ ಮತ್ತೆ ಕನ್ನಡಕ್ಕೆ ಪರಿಚಿತವಾಗಿವೆ ಎಂಬುದಕ್ಕೆ ಹಲವಾರು ಉದಾಹರಣೆಗಳನ್ನು ಕಾಣಬಹುದು. (ಉದಾ: ಟಾಲ್, ಕೂಂಬ್, ಮಂಕಿ, ಮ್ಯಾಂಗೊ, ಪಾಂಡ್, ಮೌಥ್, ಮೆಡುಲ್ಲಾ, ಕ್ಯಾಟ್, ಹಟ್) ಇಂತಹ ಹಲವಾರು ಉದಾಹರಣೆಗಳು ನಮ್ಮ ಕನ್ನಡ ನಾಡಿನ ಪುರಾತನ ಇತಿಹಾಸವನ್ನು, ಸಂಸ್ಕೃತಿಯ ಶ್ರೀಮಂತಿಕೆಯನ್ನು ಸಾರಿ ಹೇಳುತ್ತಿವೆ.

ಪೌರಾಣಿಕವಾಗಿಯೂ ನೋಡಿದರೆ ಕನ್ನಡ ನಾಡಿನಲ್ಲಿರುವ ಕಿಷ್ಕಿಂದೆಯ ಜನರು ಶ್ರೀರಾಮನಂತಹ ವೀರನಿಗೆ ಸಹಾಯ ಮಾಡಿದ ಪರೋಪಕಾರಿಗಳಾಗಿದ್ದರು. ಅಷ್ಟೆ ಅಲ್ಲದೆ; 'ದಕ್ಷಿಣ ಭಾರತದ ಇತಿಹಾಸವೆಂದರೆ ಕರ್ನಾಟಕದ ಇತಿಹಾಸವಿದ್ದಂತೆ' ಎಂಬ ಇತಿಹಾಸಕಾರರ ಮಾತಿಗೆ



ಪೂರಕವಾಗಿ ಇದೀಗ ಭಾಷಣವನ್ನು ಮಾಡಿದ ಕು. ನಿಹಾರಿಕ ಸಂಕ್ಷಿಪ್ತವಾಗಿ ಕನ್ನಡ ನಾಡಿನ ಇತಿಹಾಸವನ್ನು ಸುಂದರವಾಗಿ ತಿಳಿಸಿಕೊಟ್ಟಿದ್ದಾಳೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಧಾರ್ಮಿಕವಾಗಿಯೂ ಕನ್ನಡದ ನೆಲ ತನ್ನದೇ ಇತಿಹಾಸವನ್ನು ಹೊಂದಿದೆ; ಶಂಕರಚಾರ್ಯರು ಮತ್ತು ರಾಮಾನುಜಚಾರ್ಯರು ಬೇರೆ ನೆಲೆಯವರಾದರೂ ನಮ್ಮಲ್ಲಿ ಮಠ, ಮಂದಿರಗಳನ್ನು ನಿರ್ಮಿಸಲು ಸಾಧ್ಯವಾಯಿತು. ಜೊತೆಗೆ ದಾಸಶ್ರೇಷ್ಠರು, ಕೀರ್ತನಕಾರರು ಜನರ ಮನದಲ್ಲಿ ನೆಲೆಗೊಳ್ಳಲು ಕನ್ನಡ ಭಾಷೆ ಅನುವು ಮಾಡಿಕೊಟ್ಟಿದೆ. ಜೊತೆಗೆ ಕರ್ನಾಟಕ ಸಂಗೀತವೊಂದು ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದಿದೆ ಎಂದರೆ ಕನ್ನಡತನಕ್ಕೆ ಇದಕ್ಕಿಂತ ಹೆಮ್ಮೆಯ ವಿಚಾರ ಯಾವುದಿದೆ? ಸಾಹಿತ್ಯಿಕವಾಗಿಯೂ ಕನ್ನಡ ಸುವರ್ಣ ಅಕ್ಷರಗಳಿಂದ ಬರೆಯಲ್ಪಟ್ಟ ಇತಿಹಾಸವನ್ನು ಹೊಂದಿದೆ.

ಇಂಗ್ಲಿಷ್ ಭಾಷೆ ಇನ್ನೂ ಸೃಷ್ಟಿಯಾಗಿರದ ಕಾಲದಲ್ಲಿ ಪಂಪನಂತಹ ಮಹಾಕವಿಯಿಂದ ಕನ್ನಡದಲ್ಲಿ ಮಹಾಗ್ರಂಥಗಳು ರಚಿಸಲ್ಪಟ್ಟಿದ್ದವು. ಇವು ಕನ್ನಡ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ ಭಾರತದ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳಾಗಿವೆ. ಆಧುನಿಕ ಕನ್ನಡದಲ್ಲಿಯೇ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದು ನಮ್ಮ ಮುಡಿಗೇರಿಸಿಕೊಂಡಿದ್ದೇವೆ. ಇದನ್ನೆಲ್ಲ ಪರಿಗಣಿಸಿದರೆ 'ನಾವು ಮಹಾನ್ ಪರಂಪರೆಯ ಮಹಾನ್ ಮಕ್ಕಳು' ಎಂಬ ಭಾವನೆ ಉಂಟಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ನಮ್ಮ ಭಾಷೆಯನ್ನು ಕಾಯ್ದುಕೊಳ್ಳುವ ಅನಿವಾರ್ಯತೆ ಒದಗಿ ಬಂದಿದೆ. ಜಾಗತೀಕರಣದಿಂದ ನಮ್ಮ ಕನ್ನಡ ಭಾಷೆ ನಾಶವಾಗುವ ಹಂತವನ್ನು ತಲುಪಿದೆ. ಇದನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಹೆಗಲಿಗೆ ಬಿದ್ದಿದೆ. ಯಾವ ತಾಯಿ ತನ್ನ ಮನೆಯಲ್ಲಿ ಕನ್ನಡವನ್ನು ಮಾತನಾಡುತ್ತಾಳೋ ಅಂತಹ ಮನೆಯ ಮಕ್ಕಳು ಮಾತ್ರ ಕನ್ನಡದ ಮಕ್ಕಳಾಗಿ ಬೆಳೆಯಲು ಸಾಧ್ಯ. ಪ್ರತಿಯೊಬ್ಬರ ಮನೆಯಲ್ಲಿ, ಮನದಲ್ಲಿ ಕನ್ನಡ ಭಾಷೆಯ ಒಲವನ್ನು ಬೆಳೆಸಿಕೊಂಡಲ್ಲಿ ಕನ್ನಡದ ಏಳ್ಗೆ ಸಾಧ್ಯ. ಈ ವಿದ್ಯಾಸಂಸ್ಥೆ ಇಂಗ್ಲಿಷಿನ ಜೊತೆಗೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಉಳಿಸಿಕೊಂಡಿರುವುದು ನಮ್ಮೆಲ್ಲರ ಪುಣ್ಯ. ಇದಕ್ಕೆ ಕಾರಣೀಭೂತರಾಗಿರುವ ಈ ಸಂಸ್ಥೆಯ ಸಂಸ್ಥಾಪಕರಿಗೆ ನಾನು ವಂದಿಸುತ್ತೇನೆ. 'ಕನ್ನಡ ನೆಲದಲ್ಲಿ ಕನ್ನಡ ಭಾಷೆ ದಾಸ್ಯಕ್ಕೆ ಒಳಗಾದರೆ ನಾವು ಪರಕೀಯರಾಗಿ ಉಳಿಯಬೇಕಾಗುತ್ತದೆ'. ಹಾಗಾಗಿ ನಾವು ನಮ್ಮ ಉಜ್ವಲ ಪರಂಪರೆಯನ್ನು ಉಳಿಸಿಕೊಳ್ಳಲು, ನಮ್ಮತನವನ್ನು ಉಳಿಸಿಕೊಳ್ಳಲು, ನಮ್ಮ ಕನ್ನಡದ ಹಿರಿಮೆ–ಗರಿಮೆಯನ್ನು ಮೆಲುಕು ಹಾಕಿಕೊಳ್ಳಲು ಈ ರಾಜ್ಯೋತ್ಸವ ಒಂದು ಅಭಿಮಾನದ ವೇದಿಕೆಯಾಗಬೇಕು. ಇಂತಹ ಕಾರ್ಯಕ್ರಮಗಳು ನಮಗೆ ಸ್ಫೂರ್ತಿಯಾಗಬೇಕು.

ನಾವು ಹಲವಾರು ಭಾಷೆಗಳನ್ನು ಕಲಿತರೂ ಕನ್ನಡವನ್ನು ನಮ್ಮ ಮನೆಯ ಮಾತನ್ನಾಗಿ ಬಳಸಿಕೊಳ್ಳಬೇಕು. ತಾಯಿ ಭಾಷೆ ತಾಯಿಯನ್ನು ಗೌರವಿಸುವುದನ್ನು ಕಲಿಸುತ್ತದೆ, ಸಂಬಂಧಗಳ ಮಹತ್ವವನ್ನು ತಿಳಿಸುತ್ತದೆ. ನಾವು ನಮ್ಮತನ, ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳಬೇಕಾದ ಜವಾಬ್ದಾರಿಯನ್ನು ಹೊಂದಬೇಕು. ನಮ್ಮ ಮಕ್ಕಳನ್ನು ದೇಶ ಪ್ರೇಮಿಗಳನ್ನಾಗಿ, ಭಾಷಾ ಪ್ರೇಮಿಗಳನ್ನಾಗಿ, ಸಂಸ್ಕೃತಿ ಪ್ರೇಮಿಗಳನ್ನಾಗಿ ಮಾಡುವ ಛಲವನ್ನು ನಾವು ತೊಡಬೇಕು.

# ಬದುಕಿನ ದಾರಿ

ಹೃದಯ ಎಂಬುದು ಒಂದು ವಿಶಾಲವಾದ, ಕೃಷಿಗೆ ಯೋಗ್ಯವಾದ ಭೂಮಿ ಇದ್ದಂತೆ. ಅದರಲ್ಲಿ ಪ್ರೀತಿ, ದ್ವೇಷ, ಅಸೂಯೆ, ತ್ಯಾಗ, ಹಗೆತನ, ಸುಳ್ಳು, ನಿಜ, ಕೆಟ್ಟತನ, ದಾನ, ಧರ್ಮ, ಒಳ್ಳೆಯತನ, ಕೆಡುವ ದಾರಿ, ಬದುಕುವ ದಾರಿ ಇವೆಲ್ಲವೂ ಇವೆ. ಯಾವುದೇ ಬೀಜವನ್ನು ಬಿತ್ತಿದರೂ ಅದು ಫಲ ಕೊಡುತ್ತದೆ. ಆದರೆ ಯಾವುದನ್ನು ಬಿತ್ತಬೇಕೆಂಬ ತೀರ್ಮಾನ ನಮ್ಮ ಕೈಯಲ್ಲಿದೆ. ಇದು ನಮ್ಮ ನಿಮ್ಮೆಲ್ಲರ ಕರ್ತವ್ಯ ಕೂಡ ಆಗಿದೆ. ಜನ್ಮ ಜನ್ಮಗಳಲ್ಲೆಲ್ಲಾ ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠವಾಗಿದೆ. ಆದ್ದರಿಂದ ನಾವು ಒಳ್ಳೆಯ ಬೀಜವನ್ನು ಬಿತ್ತಿ, ಒಳ್ಳೆಯ ಫಲವನ್ನು ಪಡೆಯುತ್ತ ಸಮಾಜದಲ್ಲಿ ಅತ್ಯಂತ ಶ್ರೇಷ್ಠರಾಗಿ ಬಾಳಬೇಕೆಂಬುದು ನನ್ನ ಆಸೆಯಾಗಿದೆ.



**ಎಂ ರಿತಿಶಾ**
5ನೆ ತರಗತಿ, 'ಡಿ' ವಿಭಾಗ

# ಅಮ್ಮ ಎಂದರೆ

ಸಾಧಕರೆಂದರೆ ತಮ್ಮ ಜೀವನದಲ್ಲಿ ಒಂದು ಗುರಿ ಇಟ್ಟುಕೊಂಡು ಅದನ್ನು ಸಾಧಿಸುವವರು. ಸಾಧಕರು ತಮ್ಮ ಜೀವನದಲ್ಲಿ ಏನೇ ಕಷ್ಟ ಬಂದರು ಅವರ ಗುರಿಯನ್ನು ಸಾಧಿಸದೆ ಬಿಡುವುದಿಲ್ಲ. ನಾನು ಎಷ್ಟೊಂದು ಸಾಧಕರನ್ನು ಕಂಡಿದ್ದೇನೆ. ಆದರೆ ಅಷ್ಟರಲ್ಲಿ ಒಬ್ಬರನ್ನು ಬಹಳ ಮೆಚ್ಚಿದೆ. ಆ ಸಾಧಕರೇ ನನ್ನ ಅಮ್ಮ. ನನ್ನ ಅಮ್ಮ ಎಲ್ಲರಿಗೂ ಪರಿಚಯವಾಗದೆ ಇರಬಹುದು. ಆದರೆ ನನ್ನ ಅಮ್ಮ ಅವರ ಜೀವನದಲ್ಲಿ ನಾನು ಹಾಗೂ ನನ್ನ ಅಣ್ಣನನ್ನು ಯೋಗ್ಯರನ್ನಾಗಿ ಮಾಡಿ, ಸಮಾಜಕ್ಕೆ ಉತ್ತಮವಾದ ಪ್ರಜೆಗಳನ್ನಾಗಿ ಮಾಡುವುದೇ ತನ್ನ ಗುರಿಯನ್ನಾಗಿಸಿಕೊಂಡು, ಆ ಉದ್ದೇಶ ಸಾಧನೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

'ನಡೆವವರೆಡವದೆ ಕುಳಿತವರೆಡಹುವರೆ' ಎಂಬಂತೆ ನಾವು ತಪ್ಪು ಹೆಜ್ಜೆ ಇಟ್ಟಾಗಲೆಲ್ಲ ನಮ್ಮನ್ನು ಸರಿಯಾದ ದಾರಿಗೆ ತರುತ್ತಿರುವವರು ನನ್ನ ಅಮ್ಮ. ನಮ್ಮಿಬ್ಬರಿಗೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ. ಅಮ್ಮ ತ್ಯಾಗಮಯಿಯಾಗಿ ತನ್ನೆಲ್ಲ ಸುಖಗಳನ್ನು ಬದಿಗೊತ್ತಿ ನಮಗೋಸ್ಕರವೇ ಜೀವಿಸುತ್ತಿದ್ದಾಳೆ. ನಾವು ತಡರಾತ್ರಿಯವರೆಗೂ ಎದ್ದಿದ್ದರೆ ತಾನು ನಮ್ಮೊಂದಿಗಿದ್ದು ಭರವಸೆಯ ಆಸರೆಯಾಗಿರುತ್ತಾಳೆ. ಇಂಥಹ ತಾಯಿಯ ಪ್ರೀತಿಯನ್ನು ವರ್ಣಿಸಲು ಹಾಗು ಬೆಲೆಕಟ್ಟಲೂ ಸಾಧ್ಯವಿಲ್ಲ. ನಮ್ಮ ಅಣ್ಣ ವಿದೇಶದಲ್ಲಿ ವ್ಯಾಸಂಗ ಮಾಡಲು ಹೋಗಿದ್ದು ಎಲ್ಲಿಲ್ಲದ ಸಂತೋಷವಾಗಿದೆ. ಅವರ ಆಸೆಯಂತೆ ನಾನು ಚೆನ್ನಾಗಿ ವಿದ್ಯಾಭ್ಯಾಸಮಾಡಿ ಒಳ್ಳೆಯ ಮನುಷ್ಯಳಾಗಿ ಅಮ್ಮನ ಮುಖದ ನಗುವಾಗಿ ನನ್ನ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬಾಸೆ ನನ್ನದು. ಅಮ್ಮ ಇಲ್ಲದಿದ್ದರೆ ನಾನು ಇವತ್ತು ಇಲ್ಲಿ ಇರುತ್ತಿರಲಿಲ್ಲ. ಅಮ್ಮನೇ ನಾ ಕಂಡ ಸಾಧಕಿ ಎಂದರೆ ತಪ್ಪಾಗಲಾರದು. ಇಂತಹ ನನ್ನ ಅಮ್ಮನ ಋಣವನ್ನು ತೀರಿಸಲು ಸಾಧ್ಯವೇ?



**ಲಕ್ಷಿತಾ ಶಿವಕುಮಾರ್**
9ನೆ ತರಗತಿ, 'ಸಿ' ವಿಭಾಗ

# ಸಾಧನೆಯ ಹಾದಿಯಲ್ಲಿ



ಮನುಷ್ಯನು ಹುಟ್ಟಿದ ನಂತರ ಅವನು ಜೀವನದಲ್ಲಿ ಹೇಗೆ ಬದುಕುತ್ತಾನೆ ಎಂಬುದು ಬಹುಮುಖ್ಯ. ಮನುಷ್ಯ ತನ್ನ ಜೀವನವನ್ನು ಸುಖವಾಗಿ ನಡೆಸಬೇಕೆಂದರೆ ಅವನಲ್ಲಿ ಒಳ್ಳೆಯ ಗುಣ, ನಡತೆ ಮತ್ತು ಮನಸ್ಸು ಇರಬೇಕು. ಹೀಗೆ ನಾವು ಬದುಕಿದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಸಮಾಜದಲ್ಲಿ ಒಬ್ಬ ವ್ಯಕ್ತಿ ಒಳ್ಳೆಯ ರೀತಿಯಲ್ಲಿ ಗುರುತಿಸಲ್ಪಟ್ಟಿದ್ದಾನೆಂದರೆ ಅದು ಅವನು ತೊಡುವ ಬಟ್ಟೆ ಯಿಂದಾಗಲಿ ಅಥವಾ ಶ್ರೀಮಂತಿಕೆಯಿಂದಾಗಲಿ ಅಲ್ಲ. ಅವನು ಗುರುತಿಸಲ್ಪಡುವುದು ಅವನ ಸಾಧನೆಯಿಂದ. ಉದಾಹರಣೆಗೆ ಎ ಪಿ ಜೆ ಅಬ್ದುಲ್ ಕಲಾಂ, ಡಾ॥ ಎಸ್ ರಾಧಾಕೃಷ್ಣನ್, ಎಂ ಕೆ ಗಾಂಧಿ ಮುಂತಾದವರು. ಈ ಎಲ್ಲಾ ಸಾಧಕರಲ್ಲಿ ನನಗೆ ಇಷ್ಟವಾಗಿದ್ದು ಡಾ. ಎ ಪಿ ಜೆ ಅಬ್ದುಲ್ ಕಲಾಂರವರು. ಅವರು ನಮ್ಮ ದೇಶಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅಗ್ನಿ ಹಾಗೂ ಪೃಥ್ವಿಯಂತಹ ದೊಡ್ಡ ಕ್ಷಿಪಣಿಗಳನ್ನು ನೀಡಿದ ಅವರ ಕೊಡುಗೆ ಮಹತ್ತರವಾದದ್ದು. ನಾ ಕಂಡ ಎಲ್ಲಾ ಸಾಧಕರು ದೀಪಕ್ಕೆ ಹೋಲುತ್ತಾರೆ. ತಾವು ಉರಿದು ಸುತ್ತಲ ಲೋಕಕ್ಕೆ ಬೆಳಕು ನೀಡುತ್ತಾರೆ. ಏನಾದರೂ ಸಾಧಿಸುವುದಕ್ಕೆ ಒಂದೆರಡು ದಿನಗಳಲ್ಲಿ ಸಾಧ್ಯವಿಲ್ಲ. ಸಾಧಕರಾಗಬೇಕಾದರೆ ಪ್ರತಿನಿತ್ಯ ಅಭ್ಯಾಸಮಾಡಿ, ಕಷ್ಟಪಟ್ಟು ನಮ್ಮ ಜೀವನವನ್ನು ಅದಕ್ಕೆ ಮುಡುಪಾಗಿಟ್ಟರೆ ಮಾತ್ರ ಸಾಧ್ಯ. ನಾವು ಈ ಎಲ್ಲಾ ಸಾಧಕರನ್ನು ನೋಡಿ ಕಲಿಯು ವುದು ಬಹಳ ಇದೆ. ನಾವೆಲ್ಲರು ನಮ್ಮ ಜೀವನದಲ್ಲಿ ಇವರ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು, ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ, ಸಾಧಿಸುವ ಛಲವೊಂದಿದ್ದರೆ ಸಾಕು ಎಂಬುದನ್ನರಿತು ಸಾಧನೆಯ ಹಾದಿಯಲ್ಲಿ ನಡೆಯುವ ಹೆಬ್ಬಯಕೆ ನನ್ನದು.

**ಹಿತೇಶ್ ಎಸ್ ಗೌಡ**
9ನೆ ತರಗತಿ, 'ಸಿ' ವಿಭಾಗ


# ಪ್ರಜ್ಞೆ ಮತ್ತು ವಿವೇಕ

**"ದೇರ್ ಇಸ್ ಅ ವಿಸ್ಡಂ ಆಫ್ ದ ಹೆಡ್ ಆಂಡ್ ವಿಸ್ಡಂ ಆಫ್ ದ ಹಾರ್ಟ್."**

–ಚಾರ್ಲ್ಸ್ ಡಿಕೆನ್ಸ್

ದೇಹದಲ್ಲಿ ಬಿಸಿನೆತ್ತರು ಓಡುತ್ತಿದೆ, ಶ್ವಾಸಕೋಶ ಉಸಿರಾಡುತ್ತಿದೆ, ಹೃದಯ ಬಡಿಯುತ್ತಿದೆ. ಸಮಾಜದ ಪ್ರಕಾರ ಈ ಕಾರ್ಯಗಳು ನಡೆಯುತ್ತಿದ್ದರೆ ಮನುಷ್ಯ ಬದುಕಿರುವವನೆಂಬ ಭಾವನೆ. ವಾಸ್ತವಿಕವಾಗಿ ನೋಡಿದರೆ, ಓರ್ವ ಮನುಜನಿಗೆ "ಪ್ರಜ್ಞೆ" ಇದ್ದರೆ, ಅವನು ಸಮಾಜಿಕ ರೂಪುಗಳಲ್ಲಿ ಬದುಕಿರುವವನೆಂದರ್ಥ. ಈ "ಪ್ರಜ್ಞೆ" ಎಂದರೇನು? ಆಂಗ್ಲ ಬರಹಗಾರ "ಚಾರ್ಲ್ಸ್ ಡಿಕೆನ್ಸ್" ಸುಂದರವಾಗಿ ನುಡಿದಿದ್ದಾನೆ– "ಮೆದುಳ ಪ್ರಜ್ಞೆಗೂ, ಹೃದಯದ ವಿವೇಕಕ್ಕೂ, ಬಹಳಷ್ಟು ಅಂತರವಿದೆ". ಏನಿದು?

ಮೆದುಳು, ಭೌತಿಕ ದೇಹವೆಂಬ ನಾವೆಯ ನಾವಿಕ. ಮೆದುಳ ಪ್ರಜ್ಞೆ ಎಂದು ನಾವು ಅರ್ಥೈಸಿಕೊಂಡಾಗ, "ಮೆದುಳಿನ ಪ್ರಜ್ಞೆಯೆಂದರೆ, ಸಮಾಜದ ನಿರ್ಭಾವ ಭಾಗದಲ್ಲಿ ಕೊಂಡಾಡುವ ತರ್ಕಶಾಸ್ತ್ರ. ಈ ಮೆದುಳು ಎಂಬ ವಿಸ್ಮಯದಲ್ಲಿ ತರ್ಕವಿದ್ದರೆ ಅದು ಪ್ರಜ್ಞೆ, ಆ ತರ್ಕವು – ಒಬ್ಬರಿಂದ ಒಬ್ಬರಿಗೆ ತುಂಬಾ ವ್ಯತ್ಯಾಸವಿರುವ ಒಂದು ವಿಷಯ. ಮೆದುಳಿನ ಪ್ರಜ್ಞೆಯನ್ನು ಕೆಲವು ಸಂದರ್ಭಗಳಲ್ಲಿ ಜಾರಿಗೆ ತಂದು ಉಪಯೋಗಿಸಿಕೊಳ್ಳಬಹುದು. ಆದರೆ ಕೆಲವು ಸಂದರ್ಭಗಳು ತರ್ಕಕ್ಕೆ ನಿಲುಕದ್ದು". ದೇಹದ ಆರೋಗ್ಯವು, ಮೆದುಳೊಳಗಿನ ಪ್ರಜ್ಞೆಯ ಮೇಲೆ ಅವಲಂಬಿತವಾಗಿದೆ. ಅತಿಪ್ರಜ್ಞಾವಂತರಿಗೂ, ಪ್ರಜ್ಞೆಯಿಲ್ಲದವರಿಗೂ, ಅಷ್ಟು ವ್ಯತ್ಯಾಸಗಳೇ ಇಲ್ಲ! ಹೋಲಿಕೆಯ ರೀತಿಯಲ್ಲಿ ನೋಡಿದರೆ, ಮೆದುಳಿನ ಪ್ರಜ್ಞೆಯು, ಒಬ್ಬ ಮನುಜನ ವಿದ್ಯಾರ್ಹತೆಯಿದ್ದಂತೆ. ಅದು ಎಲ್ಲಾ ಕಡೆಯೂ ಉಪಯುಕ್ತವಾಗುವುದಿಲ್ಲ.




ಆ ಸಮಯದಲ್ಲಿ ಧಾವಿಸಿ ಬರುವುದೇ ವಿವೇಕ – ಹೃದಯದ ವಿವೇಕ. ಸಾಮಾನ್ಯವಾಗಿ, 'ಹೃದಯ' ಎಂದರೆ ಭಾವನೆಗಳಿಗೆ ಹೋಲಿಸುತ್ತಾರೆ. ಯಾವ ಸಮಯದಲ್ಲಿ ಯಾವ ಭಾವನೆಯ ವ್ಯಕ್ತವಾಗಬೇಕೆಂಬುದೇ 'ವಿವೇಕ'. ದುರಾದೃಷ್ಟವೋ, ಅದೃಷ್ಟವೋ, ಈ ಭಾವನೆಗಳನ್ನು ತರ್ಕದೊಂದಿಗೆ ಬೆರೆಸಲು ಸಾಧ್ಯವೇ ಇಲ್ಲ. ಭಾವನೆಗಳು ಒಂದು ಪ್ರಾಣಿಯನ್ನು ಮನುಷ್ಯನನ್ನಾಗಿ ಮಾಡುವುದು. ಹೃದಯದ ವಿವೇಕಕ್ಕೂ, ಮೆದುಳಿನ ಪ್ರಜ್ಞೆಗೂ ಏನಾದರು ಸಂಬಂಧವಿದೆಯೇ?

ಸಂಕೀರ್ಣತೆಗಳಿಂದ ಕೂಡಿರುವ ಈ ಸಮಾಜದಲ್ಲಿ, ಹೃದಯವೇ – ಭಾವನೆಯ ಮಾಲೀಕನೆಂಬ ಒಂದು ನಂಬಿಕೆ. ವಿಪರ್ಯಾಸವೆಂದರೆ ಹೃದಯಕ್ಕೆ ಯೋಚಿಸುವ ಸಾಮರ್ಥ್ಯವೇ ಇಲ್ಲ. ಇಲ್ಲಿ ಮತ್ತೆ, ನಮ್ಮ ಮೆದುಳಿನ ಪಾತ್ರ ಹೆಚ್ಚಾಗುವುದು. ಇನ್ನೊಂದು ವಿರೋಧಾಭಾಸವೆಂದರೆ, ಹೃದಯವಿಲ್ಲದೆ, ಮೆದುಳು ಬದುಕುವುದಿಲ್ಲ. ಹಾಗಾಗಿ ನಾವು ಮನುಜರು 'ಮನಸ್ಸು' ಎಂಬ ಒಂದು "ಮ್ಯಾಗ್ನಮ್ ಓಪಸ್ (ಗ್ರೀಕ್ ಭಾಷೆಯಲ್ಲಿ ಹೀಗೆಂದರೆ ಅನುಪಮ ಕೃತಿ ಎಂದರ್ಥ)" ರಚಿಸಿದ್ದೇವೆ. ಈ ಮನಸ್ಸು ನಮ್ಮ ದೇಹದಲ್ಲಿ ಒಂದು ಕಾಣದ ಶಕ್ತಿಯಾದರೂ, ಮೆದುಳಿನ ಪ್ರಜ್ಞೆ, ಹೃದಯದ ವಿವೇಕವನ್ನು ಸಮತೋಲನಗೊಳಿಸುವ ಒಂದು ಯಂತ್ರ.

ಯಾವುದೇ ಕೆಲಸ ಮಾಡಿದರೂ, ಮೆದುಳಿನ ಪ್ರಜ್ಞೆಯೇ ಬೇರೇ, ಹೃದಯದ ವಿವೇಕವೇ ಬೇರೆ. ನಗುವ ವಿಷಯವೇನೆಂದರೆ, ಪ್ರಜ್ಞೆಗೂ, ವಿವೇಕಕ್ಕೂ ಆಂಗ್ಲದಲ್ಲಿ ಒಂದೇ ಹೆಸರು 'ವಿಸ್ಡಂ'. ಸಾಧಕರಾಗುವವರು – ಮೆದುಳಿನ ಶೇಕಡ ನೂರನ್ನೂ ಉಪಯೋಗಿಸಿಕೊಂಡವರು, ಅಥವಾ ಹೃದಯದ ಎಲ್ಲಾ ಭಾವನೆಗಳನ್ನು ಆ ಸಮಯಕ್ಕನುಗುಣವಾಗಿ ತೆರೆದಿಡುವವರು, ಇಲ್ಲವೇ ಪ್ರಜ್ಞೆ, ಭಾವನೆ – ವಿವೇಕ – ತರ್ಕಗಳಿಂದ ಹೊಸ ತರ್ಕಗಳನ್ನು ನಿರರ್ಗಳವಾಗಿ ಜಗತ್ತಿಗೆ ನೀಡಿದವರು. ಇವು ಯಾವುದನ್ನೂ ತಿಳಿಯದೆ ಮಂಕಾಗಿ ಸಂಕೀರ್ಣ ಸಮಾಜದಲ್ಲಿ 'ಸಂಸಾರದ ಜಂಜಾಟದಲ್ಲಿ' ಗೊಂದಲಗಳಲ್ಲಿ ಬೆಲೆಯಿಲ್ಲದ ಅನುಭವಗಳ ಮಧ್ಯೆ ಮಗುವಿನ ಹಾಗೆ ತಾನೆ ತನ್ನ ಬೆರಳನ್ನು ಚೀಪುತ್ತಾ ಖುಷಿಯಿಂದ ಬಾಳುವವರು ಸಾಮಾನ್ಯರು.

ಪ್ರಜ್ಞೆ ಹಾಗು ವಿವೇಕ ಬಾಳೆಂಬ ಒಂದೇ ಒಂದು ನಾಣ್ಯದ ಎರಡು ಮುಖಗಳಿದ್ದ ಹಾಗೆ. ಹೃದಯದ ವಿವೇಕವನ್ನು ಯಾವ ಸಮಯ ಸಂದರ್ಭಕ್ಕೆ ಅನ್ವಯಿಸಬೇಕು ಎಂಬುದು ಮೆದುಳಿನ ಅನುಭವದ ಪ್ರಜ್ಞೆಯ



ಫಲ. ಒಟ್ಟಿನಲ್ಲಿ ಮನರಂಜನೆಯಲ್ಲಿ ಬಾಳುತ್ತಿರುವ ಭಾರತೀಯರು ಈ ವಿಷಯದಲ್ಲಿ ಮೇಲುಗೈ. ಭಾವನೆಗಳನ್ನು ರಭಸದಲ್ಲಿ ಸುರಿಯುವ ನಯಾಗರ ಜಲಪಾತದ ನೀರಿನಂತೆ ಧಾರಾವಾಹಿಗಳು, ಚಲನಚಿತ್ರಗಳು ಅತೀ ಉತ್ತಮವಾಗಿ ತೋರುತ್ತವೆ. ಮನರಂಜನೆಯ ರೂಪಗಳಾದ ಇವುಗಳಲ್ಲಿ ಯಾವ ಸಂದರ್ಭಕ್ಕೂ ಯಾವುದೇ ಭಾವನೆಯೂ – ವಿವೇಕವೂ ಅನ್ವಯವಾಗದಿದ್ದರೂ ಜನರ ಪ್ರಜ್ಞೆಯನ್ನು ವಿವೇಕವೆಂದು ತೋರಿಸಿ ಅಥವಾ ವಿವೇಕವನ್ನೇ ತರ್ಕವನ್ನಾಗಿಸಿ ಮುದಕೊಡುವ ತಂತ್ರವನ್ನು ಅತ್ಯಂತ ಚತುರತೆಯಿಂದ ಉಪಯೋಗಿಸಿಕೊಳ್ಳುತ್ತಾರೆ. ಮತ್ತೆ ಅದೇ ಮಾತು ಈ ವಿಷಯದಲ್ಲಿ ನಾವು ಎಷ್ಟೇ ಅನುಭವಸ್ಥರಾಗಿದ್ದರೂ ಎಷ್ಟೇ ಭಾಷಣಗಳನ್ನು ಕೊಟ್ಟರೂ ಅದು ನಮ್ಮ ಹಿಡಿತಕ್ಕೆ ಬರಲಾರದು –'ತರ್ಕಕ್ಕೆ ನಿಲುಕದ್ದು'.

ಸಮಾಜದ ಹಲವಾರು ವಿಭಾಗಗಳಲ್ಲಿ ಈ ಮೆದುಳು – ಹೃದಯದ ಸಂಬಂಧವನ್ನು ಗಮನಿಸಿದಾಗ ನನಗೆ ಅನಿಸಿದ್ದು ಹೀಗೆ. 'ಕವಿಗಳ ಮೂಲೆ'ಯಲ್ಲಿ ವಿವೇಕಕ್ಕೆ ಹೆಚ್ಚು ಪ್ರಾಧಾನ್ಯತೆ ಇದ್ದು, ಕೆಲವೊಮ್ಮೆ ಆಕರ್ಷಣೆಗಾಗಿ (ತಮಾಷೆಗಾಗಿ) ವಿವೇಕವನ್ನು 'ಪ್ರಜ್ಞಾ'ವಂತ ಜನರ ತಲೆಯಲ್ಲಿ ಒಂದು ಸೋಜಿಗದಂತೆ ಬಣ್ಣಿಸಿ ತಮ್ಮ ರಸಮಯವಾದ ಕವಿತೆಗಳನ್ನು ವ್ಯಕ್ತಪಡಿಸುತ್ತಾರೆ. ಇನ್ನೂ ಕೆಲವು ವೈದ್ಯರೂ, ಯಂತ್ರಶಿಲ್ಪಿಗಳೂ (ಕಾಲದ ವಿದ್ಯೆಯ, ಪೋಷಕರ ಒತ್ತಡದಿಂದ ಓದಿದವರು) ಪ್ರಜ್ಞೆಗೂ ತಲೆದೂಗದೆ, ವಿವೇಕಕ್ಕೂ ಶರಣಾಗದೆ ಕಛೇರಿಯ ಏಕೈಕ ಅನುಭವದ ಒತ್ತಡದಲ್ಲಿ ವಿಲವಿಲನೇ ಒದ್ದಾಡುವುದನ್ನೂ ನಾವು ಕಾಣಬಹುದು. ಇನ್ನು ವಿಜ್ಞಾನಿಗಳು ಮೆದುಳ ಪ್ರಜ್ಞೆಯನ್ನು ಪೂರ್ಣ ಉಪಯೋಗಿಸಿ, ಸಮಾಜಕ್ಕೆ ಹಲವಾರು ಪರಿಹಾರ ಕೊಡುಗೆಗಳನ್ನು ನೀಡುವುದನ್ನೂ ನಾವು ಕಾಣಬಹುದು. ಹೀಗೆ ಸಮಾಜವು ವಿವೇಕ ಪ್ರಜ್ಞೆಗಳ ಮಿಶ್ರಣವಾಗಿದ್ದು, ಹಲವಾರು ಚಿಂತನೆಗಳಿಗೆ ನಾಂದಿ ಹಾಡಿದೆ. ಈ ಚಿಂತನೆಗಳು ಎಲ್ಲರಿಗೂ ತಿಳಿಯದ ಪ್ರಬಂಧಗಳಂತೆ ನಡೆಯುವುದು. ಮತ್ತೆ ಅದೇ ಈ ಪ್ರಬಂಧವೂ 'ತರ್ಕಕ್ಕೆ ನಿಲುಕದ್ದು'.

ಈಗ, ಇಷ್ಟು ಬೋಧಿಸಿದ್ದನ್ನು, ಪಾಲಿಸುವುದು ಹೇಗೆ? ಮನ್ವಂತರಗಳೂ ಒಬ್ಬ ಮನುಷ್ಯನಿಂದ ಪ್ರಾರಂಭವಾಗುವವು. ಎಲ್ಲರೂ ವಿವೇಕವಂತರಾಗಲು ಸಾಧ್ಯವಿಲ್ಲ. ಹಾಗೆಯೇ, ಎಲ್ಲರೂ ಪ್ರಜ್ಞಾವಂತರಾಗಲೂ ಸಾಧ್ಯವಿಲ್ಲ. ಹಾಗೆ ಆಗಿಬಿಟ್ಟರೆ, ವಕೀಲರಿಗೆ ಬೆಲೆಯೇ ಇರುವುದಿಲ್ಲ. ಸಂಬಂಧಗಳು – ಸಂದರ್ಭಗಳಿಗೆ ತಕ್ಕಂತೆ, ನಮ್ಮ ಹೃದಯದ ಅಥವಾ ನಮ್ಮ ಮೆದುಳಿನ ಅಂತರಾಳದ ಮಾತನ್ನು ಆಸಕ್ತಿಯಿಂದ ಕೇಳಬೇಕು. ಉದಾಹರಣೆಗೆ, ಒಬ್ಬ ಬಡ ಭಿಕ್ಷುಕ (ಭಿಕ್ಷುಕನಾದದ್ದು ಬಡತನದಿಂದಲೇ ಅಲ್ಲವೇ.. ಮತ್ತೆ ಇಲ್ಲಿ "ವಿವೇಕ"ದ ಪ್ರಯೋಗ), ಬಂದು ನಿಮ್ಮ ಬಳಿ ಬೇಡಿ ಬೇಡಿ ಅತ್ತರೆ, ನಮಗೆ ಸಹಾಯ ಮಾಡಬೇಕೆನ್ನಿಸುವುದು ವಿವೇಕದ ಆಟ. ಅವನ ನಿಜ ಸ್ವರೂಪವನ್ನು ನೋಡಬಯಸುವುದೇ ಪ್ರಜ್ಞೆಯ ಹಂಬಲ. ಈ ಉದಾಹರಣೆ ಒಂದು ಸಾಮಾನ್ಯ ಉದಾಹರಣೆ ಆಗಿರಬಹುದು. ಆದರೆ ಇಲ್ಲಿ ಪ್ರಜ್ಞೆ ಹಾಗು ವಿವೇಕಗಳ ಪಾತ್ರ ಹಿರಿದು ಎಂಬುದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು.

ಭಾವನೆಗಳ ಉದ್ವೇಗದಲ್ಲಿ ನಾವು ಹಲವಾರು ತಪ್ಪುಗಳನ್ನು ಮರು ಯೋಚಿಸದೆ ಮಾಡುತ್ತೇವೆ. ಇದನ್ನು ತಡೆಯಲು ಸಹಾಯಕ್ಕೆ ಬರುವುದೇ ಪ್ರಜ್ಞೆ. ಪ್ರಜ್ಞೆಯ ಅಂತರಂಗವನ್ನು ನಾವು ಕೇಳಿ ವಿಶ್ಲೇಷಿಸಿದಾಗ, ವಿವೇಕದ ರೀತಿಯು ಸರಿಯೋ ತಪ್ಪೋ ಎನ್ನುವುದು ಸುಲಭವಾಗಿ ತಿಳಿದು ಹೋಗುತ್ತದೆ. ಒಂದು ಸ್ಪಷ್ಟ ಗುರಿ ಇದ್ದಾಗ, ಅದರಲ್ಲಿ ವಿವೇಕ, ಭಾವನೆಗಳ ಪಾತ್ರ ತುಂಬಾ ಮುಖ್ಯ. ಯೋಚಿಸಿ ಮಾಡುವ ಕೆಲಸಗಳು ಫಲಿಸದೇ ಇರಲು ಸಾಧ್ಯವೇ ಇಲ್ಲ.



**ತೇಜಸ್ ಎಚ್ ಬಾಡಾಲಾ**
10ನೆ ತರಗತಿ, 'ಎ' ವಿಭಾಗ

# ಕಥೆ

ಒಂದು ಹಳ್ಳಿಯಲ್ಲಿ ತಾಯಿಯೊಬ್ಬರು ಇದ್ದರು. ಅವರ ಹೆಸರು ಕಮಲ. ಅವಳಿಗೆ ಒಬ್ಬ ಮಗ ಇದ್ದನು. ಅವನ ಹೆಸರು ಚಿಂಟು. ಇವರು ತುಂಬ ಬಡವರಾಗಿದ್ದರು. ಚಿಂಟು ಒಂದು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದನು. ಅವನ ಅಮ್ಮ ಮನೆಕೆಲಸ ಮಾಡಿಕೊಂಡು ಬದುಕುತ್ತಿದ್ದರು. ಒಂದು ದಿನ ಶಾಲೆಯ ಊಟದ ಸಮಯದಲ್ಲಿ ಒಬ್ಬ ಕೇಸರಿಬಾತು ತಂದಿದ್ದ. ಅದನ್ನು ನೋಡಿದ ಚಿಂಟು ಬಾಯಿಯಲ್ಲಿ ನೀರು ಸುರಿಯಿತು. ಸಂಜೆ ಮನೆಗೆ ಹೋದಾಗ "ಅಮ್ಮ ನನಗೆ ಕೇಸರಿಬಾತು ಮಾಡಿಕೊಡುತ್ತೀಯಾ?" ಎಂದು ಕೇಳಿದ. ಅದಕ್ಕೆ "ಯಾವುದಾದರು ಹಬ್ಬ ಬಂದಾಗ, ಮಾಡಿಕೊಡುವೆ" ಎಂದಳು.

ಚಿಂಟು ಹಬ್ಬಕ್ಕಾಗಿ ಕಾಯುತ್ತಿದ್ದ. ಕೊನೆಗೂ ದೀಪಾವಳಿ ಹಬ್ಬ ಬಂದೇ ಬಿಟ್ಟಿತು. ಚಿಂಟು ಅಮ್ಮನಿಗೆ ಕೇಸರಿಬಾತು ಮಾಡಲು ನೆನಪಿಸಿದ. ಅಮ್ಮ ಕೇಸರಿಬಾತು ಮಾಡಿಟ್ಟು "ಕೇಸರಿಬಾತು ತುಂಬ ಬಿಸಿ ಇದೆ. ಸ್ವಲ್ಪ ಹೊತ್ತು ಬಿಟ್ಟು ತಿನ್ನು" ಎಂದು ಹೇಳಿದರು. ಚಿಂಟು ತಿನ್ನಬೇಕೆಂಬ ಆಸೆಯಿಂದ ಆತುರಪಟ್ಟು, ಬಿಸಿ ಕೇಸರಿಬಾತನ್ನೇ ಬಾಯಿಗಿಟ್ಟ. ಜೋರಾಗಿ ಕಿರುಚಿದ. ಶಬ್ದ ಕೇಳಿ ಓಡಿಬಂದ ಅಮ್ಮ ಸಮಾಧಾನ ಮಾಡಿದರು.
**ನೀತಿ:** ಆತುರಗಾರನಿಗೆ ಬುದ್ಧಿಮಟ್ಟ.



**ತನ್ವಿ ಗಿರೀಶ್**
5ನೆ ತರಗತಿ, 'ಎ' ವಿಭಾಗ





## ಹಕ್ಕಿ

ಹಕ್ಕಿ ಹಕ್ಕಿ ಪುಟ್ಟ ಹಕ್ಕಿ
ನನ್ನ ಮುದ್ದು ಪುಟ್ಟ ಹಕ್ಕಿ
ನೋಡಲು ನೀನು ಬಲು ಅಂದ
ಹಾಡಲು ನೀನು ಬಲು ಅಂದ
ದೊಡ್ಡದು ನಿನ್ನಯ ಗೆಳೆಯರ ಬಂಧ
ಕಾಳು ಕೊಡುವೆ ತಿನ್ನು ಬಾ ಕಂದ



**ಅನನ್ಯಾ ಸಿ ಛಾತ್ರ**
7ನೆ ತರಗತಿ, ಡಿ ವಿಭಾಗ

## ಕನಸು

ನಮ್ಮ ಮನ ಮುಟ್ಟುವಂತಹ
ಸ್ವಪ್ನವಾಗಿರಬೇಕು
ಕನಸಿನ ನೆನಪುಗಳಂತೆಯೇ ಉಳಿಯಬಾರದು
ನಮ್ಮನ್ನು ಜಡನಿದ್ರೆಯಿಂದ ಎಚ್ಚರಿಸಬೇಕು
ಆ ಕನಸನ್ನು ಪೂರ್ಣಮಾಡುವ
ಇಚ್ಛೆ ಉಂಟುಮಾಡುವಂತಿರಬೇಕು
ಅಂತಹ ಕನಸನು ನಾ ಕಾಣಬೇಕು



**ವಿನುತಾ ಬಿ ಎಂ**
9ನೆ ತರಗತಿ, 'ಡಿ' ವಿಭಾಗ

## ನಮ್ಮ ಗುರಿ

ಸೋಲು – ಗೆಲುವಿನ ಹಾದಿಯಲಿ
ಕಠಿಣ ಪರೀಕ್ಷೆಗಳ ಸಾಗರದಲ್ಲಿ
ನರಳಿ ನುಸುಳುವ ಸ್ಥಿತಿಯಲ್ಲಿ
ವಿಜಯ ಸಾಧಿಸುವುದು ನಮ್ಮ ಗುರಿ

ದೃಢ ಮನಸ್ಸಿನ ನಡುವೆಯಲ್ಲಿ
ಕಲ್ಲು ಮುಳ್ಳಿನ ಮಾರ್ಗದಲ್ಲಿ
ದುಃಖ– ಕಪಟಗಳ ಸಿಡಿಲಲ್ಲಿ
ವಿಜಯ ಸಾಧಿಸುವುದು ನಮ್ಮ ಗುರಿ

ಛಲ ಹೋರಾಟಗಳ ಹಠದಲ್ಲಿ
ತುಂಬಿ – ಉಕ್ಕುವ ಧೈರ್ಯದಲ್ಲಿ
ತೆರೆದ ಕಿಟಕಿಯ ಸೆರೆಮನೆಯಲ್ಲಿ
ವಿಜಯ ಸಾಧಿಸುವುದು ನಮ್ಮ ಗುರಿ.



**ಪ್ರಾಂಜಲ್ ಎಸ್**
10ನೆ ತರಗತಿ, 'ಎ' ವಿಭಾಗ

## ಪತ್ರ

ಬಂದಿದೆ ಯೋಧನಾದ ಅಣ್ಣನಿಂದ ಪತ್ರ
ಅಮ್ಮ ಅತ್ತಳು ಪತ್ರ ಇಟ್ಟು ಹೃದಯದ ಹತ್ರ
ಖಾಲಿ ಹಾಳೆಯ ಬಣ್ಣವಿದ್ದರು
ರಕ್ತದಾ ಕಲೆ ಕಂಡಿತು
ಅಮ್ಮನಿಗೆ ಮನ ಮುಟ್ಟಿತು
ಕಂಬನಿಯಾ ಹೊಳೆ ಹರಿಯಿತು
ಕರುಳು ಜೀವವ ಕರೆಯಿತು!
ಪರಮವೀರ ಚಕ್ರವೋ
ಮುದ್ದು ಮಗನ ಸಾವೋ
ಅಮ್ಮನ ಈ ರೋಧನಕೆ
ಕಾರಣವಾದರೂ ಏನು?
ಅಮ್ಮನಿಗೆ ಅಣ್ಣನ ಮೇಲಿನ ವ್ಯಾಮೋಹ
ಅಣ್ಣನಿಗೆ ದೇಶದ ಮೇಲಿನ ವ್ಯಾಮೋಹ!
'ಪತ್ರ ತೆರೆದು ನೋಡಿರಿ'ಎಂದು ಅಪ್ಪ ಗುಡುಗಲು
ನಡುನಡುಗುತ ಭಯದಿಂದಲೇ ಅಮ್ಮ ಪತ್ರ ತೆರೆದಳು
ಪತ್ರವೆಂದಿತು. .
ನಿಮ್ಮ ಮಗ.......
ಅಮ್ಮ ಜ್ಞಾನ ತಪ್ಪಿ ಭೀತಿಯಿಂದ ಕೆಳಗೆ ಬಿದ್ದಳು,
ಅಪ್ಪ ಪತ್ರ ತೆರೆದು ನೋಡಿ ಖುಷಿಯಿಂದ ಓದಿದರು
ಪತ್ರವೆಂದಿತು . . .
"ನಿಮ್ಮ ಮಗನಿಗೆ ರಜೆ ದೊರಕಿದೆ. . .
ಅಮ್ಮ ನಾನು ಮನೆಗೆ ಬರುವೆ"
ಅಮ್ಮನ ಸಂತೋಷಕ್ಕೆ ಪಾರವೇ ಇರಲಿಲ್ಲ
ಇಷ್ಟು ಸಂತೋಷಪಟ್ಟ ನರರ ನಾ ಕಂಡಿಲ್ಲ!



**ತೇಜಸ್ ಎಚ್ ಬಾಡಾಲಾ**
10ನೆ ತರಗತಿ, 'ಎ' ವಿಭಾಗ

## ಕನ್ನಡ ನಾಡಿನ ಮಹಿಮೆ



ಕನ್ನಡತಿಯಾಗಬೇಕೆಂಬುದು ಪರರ ಆಸೆ
ಆದರೆ ಕನ್ನಡತಿಯಾಗಿ ಜನಿಸಿದ ನಾನು
ತುಂಬ ಹೆಮ್ಮೆಯಿಂದ ಹೇಳುವೆ
ಪ್ರತಿ ಜನ್ಮದಲೂ ನಿನ್ನ ಮಡಿಲಲ್ಲಿ
ಕನ್ನಡದ ಕಂದನಾಗಿರ ಬಯಸುವೆ
ಈ ಪುಣ್ಯಭೂಮಿಯಲಿ ಜನಿಸಿಹೆ
ನಿನ್ನ ಮಡಿಲಲಿ ಮಗುವಾಗಿಹೆ
ಪ್ರತಿ ಜನ್ಮದಲೂ ಸಾರುವೆ ನಿನ್ನ ಕೀರ್ತಿಯ
ಸಾರುತಲೇ ಈ ಭೂಮಿಯಲಿ
ಪುಣ್ಯ ಮಣ್ಣಿನಲಿ ಮಣ್ಣಾಗುವ ಆಸೆ

**ತಿಶಾ ವಿ**
9ನೆ ತರಗತಿ, 'ಸಿ' ವಿಭಾಗ



## ಬೆಳಕು

ಈ ಕತ್ತಲೆಯ ಜಗದಲ್ಲಿ
ಒಂದು ಚಿಕ್ಕ ಬೆಳಕು ಬೇಕಾಗಿದೆ
ಸೂರ್ಯನದಲ್ಲ,
ಚಂದ್ರನದೂ ಅಲ್ಲ

ಈ ಜಗತ್ತಿಗೆ ಪ್ರೀತಿ, ಸಹಕಾರ
ಗೆಳೆತನದ ಬೆಳಕು ಬೇಕಾಗಿದೆ
ನಂಬಿಕೆ ವಿಶ್ವಾಸ ಮತ್ತು ಬಂಧನ ಬಾಂಧವ್ಯದ
ಬೆಳಕು ಬೇಕಾಗಿದೆ

ಅಹಂಕಾರ ಹೊಟ್ಟೆಕಿಚ್ಚಿನಂತಹ
ಕತ್ತಲೆಯ ನೀಗುವ ಬೆಳಕು
ಈಗ ಇಡೀ ಜಗತ್ತಿಗೆ ಬೇಕಾಗಿದೆ
ಬೆಳಕು ಬೇಕಾಗಿದೆ

ನಮ್ಮಲ್ಲಿರುವ ಆ ಚಿಕ್ಕ ಬೆಳಕನ್ನು
ಎಲ್ಲರಿಗೂ ಹಂಚಿ ಉಳಿಸೋಣ
ಜಗತ್ತು ಕತ್ತಲಲ್ಲಿ ಮುಳುಗುವ ಮುಂಚೆ
ಕತ್ತಲಿನಿಂದ ಬೆಳಕಿನೆಡೆಗೆ ಸಾಗೋಣ

ಬೆಳಕಿನಿಂದ ಉಳಿಸೋಣ
ಬೆಳಕಿನಿಂದ ಬೆಳಕಿನೆಡೆಗೆ ನಡೆಯೋಣ

**ದಿಯಾ ಎಂ ಎಂ**
9ನೆ ತರಗತಿ, 'ಸಿ' ವಿಭಾಗ



## ನಾ ಕಂಡ ಪರಿಸರ ದಿನಾಚರಣೆ

ಪರಿಸರ ಪರಿಸರ
ಜೂನಿನಲ್ಲಿ ಕೂಗುವರೆಲ್ಲರೂ ಬಾನೆತ್ತರ
ಬಯಸಿಹರೆಲ್ಲಾ ಬಾನೆತ್ತರ
ನಕ್ಕನು ಸೂರ್ಯ ಬೀರುತ್ತ ಕಿರಣವನು ಪ್ರಖರ

ಕೂಗಿಹರೆಲ್ಲರು ಬಗೆ ಬಗೆ ಘೋಷಣೆ
ನೆಟ್ಟ ಗಿಡ ಮರಕ್ಕಿಲ್ಲ ಪೋಷಣೆ



ಜೀವರಾಶಿಗಳಿಗೆ ತಪ್ಪದೀ ನೀರಿನ ಬವಣೆ
ಮಾನವನೇ ಇದಕ್ಕೆಲ್ಲಾ ನೀನೇ ಹೊಣೆ

**ಭೂಷಿತಾ ಹೆಚ್ ಎಲ್**
9ನೆ ತರಗತಿ, 'ಡಿ' ವಿಭಾಗ



## ಮಳೆ

ಮಳೆ ಮಳೆ ಮಳೆ
ನೀ ಬರದೆ ಉಳಿಯದೀ ಇಳೆ



ನಿನಗಾಗಿ ಜಪಿಸುವ ರೈತ
ಹಗಲೆಲ್ಲ ಬಾನ ನೋಡುತ
ನೀ ಬಂದರೆ ಭುವಿಯತ್ತ
ಮಂದಹಾಸ ಬೀರುತ್ತ
ಕಂಗೊಳಿಸುವುದು ಹಸಿರು
ಎತ್ತ ನೋಡಿದರತ್ತ

ನೀನಹುದು
ಭೂತಾಯಿಯ ಜೀವನಾಡಿ
ಸಕಲ ಸಂಕುಲಗಳ ಒಡನಾಡಿ
ತಿಳಿದ ನೀನಿದೆಲ್ಲವ ದಯಮಾಡಿ
ರಕ್ಷಿಸು ಎಲ್ಲರನು ಕಾಪಾಡಿ

ನೀ ಬೀರು ಸದಾ ಮುಗುಳ್ನಗೆಯ
ಸಹಿಸಿ ಎಲ್ಲ ವಿಕೋಪದ ಪರಿಯ
ತೋರದಿರು ಎಂದು ನಿನ್ನ ಉಗ್ರಬಗೆಯ
ಮನ್ನಿಸಿ ಸಲಹು ಎಲ್ಲ ಜೀವರಾಶಿಯ

**ಧನ್ಯತಾ ನಂದೀಶ್**
10ನೆ ತರಗತಿ, 'ಎ' ವಿಭಾಗ



## ತಲೆಕೆಡಿಸಿದ ಕವನ

ಕವನಗಳನು ಬರೆಯೋ
ಎಂದರು ನಮ್ಮ ಗುರುಗಳು
ನನಗೆ ತಿಳಿಯದು ಏನು ಬರೆಯೋದು

ನಾನೂ ಪ್ರಯತ್ನಿಸಿದೆ ಅದನ್ನು ತೋರಿಸಿದೆ
ಅವರು ಹೇಳಿದರು ಸರಿಯಾಗಿದೆ
ಆದರದು ನನಗೆ ಇಷ್ಟವಾಗದೆ
ಮತ್ತೊಂದು ಬರೆದೆ

ಅದನ್ನು ಓದಲು ಹೇಳಿದರು
ಬರೆಯಲು ಪರದಾಡಿದರೂ
ಓದಿದಾಗ ಎಲ್ಲರೂ ಖುಷಿಯಾಗಿ ಕೇಳಿದರು
ಆಗ ಗುರುಗಳು ನನ್ನ ಪ್ರಶಂಸಿಸಿದರು

**ಹಿತೇಶ್ ಎಸ್ ಗೌಡ**
9ನೆ ತರಗತಿ, 'ಸಿ' ವಿಭಾಗ



## ಅಪ್ಪ

ನೀ ನನ್ನ ಭೂಲೋಕದ ದೇವರು
ನೀ ನನ್ನ ಬಾಳಿನ ನಂದಾದೀಪ
ನಮ್ಮ ಸುಖಕ್ಕೆ, ನಮ್ಮ ಒಳಿತಿಗೆ
ನೀ ನಿತ್ಯ ದುಡಿಯುವೆ

ನಿನ್ನ ಶ್ರದ್ಧೆ ನಿನ್ನ ದುಡಿತ
ನಮಗೆ ಬಾಳು ನೀಡಿತು
ನೀ ನನ್ನ ಗುರು ನನ್ನ ದೈವ
ನೀ ನನ್ನ ಮಾರ್ಗದರ್ಶಕನಾಗಿ
ನನ್ನ ಒಳ್ಳೆಯ ಪ್ರಜೆಯನ್ನಾಗಿಸಿದೆ

ನಿನ್ನ ಒಂದು ಮಾತು ನನಗೆ
ನೂರಾನೆಯ ಬಲವಿದ್ದಂತೆ
ನಿನ್ನ ಒಂದು ಧ್ವನಿ ನನಗೆ
ಆಸರೆಯ ಚಿಲುಮೆಯಂತೆ

ನೀನಲ್ಲವೇ ನನ್ನ ತ್ಯಾಗದ ಮೂರ್ತಿ
ಅಪ್ಪ ನೀ ನನ್ನ ಜೀವ
ನೀ ನನ್ನ ಬಾಳಿನ ದೈವ
ನೀನೇ ನನ್ನ ಸರ್ವಸ್ವ



**ರಿಷಿಕಾ ಆರ್**
9ನೆ ತರಗತಿ, 'ಬಿ' ವಿಭಾಗ

## ಅಮ್ಮ

ಅಮ್ಮ ನೀ ಕೊಟ್ಟೆ ಈ ಜನ್ಮ
ನಾ ಇರುವವರೆಗೂ ತೀರಿಸಲಾಗದು ನಿನ್ನಯ ಋಣ
ಈ ಜಗತ್ತಿಗೆ ಪರಿಚಯಿಸಲು ನೀ
ಪಟ್ಟ ಕಷ್ಟ ನನಗೆ ತಿಳಿಯದು ಆದರೂ
ನನ್ನ ಆಸೆ ಆಕಾಂಕ್ಷೆಗಳೆಲ್ಲ ನಿನಗೆ ಗೊತ್ತು
ಅಮ್ಮ ನಿನ್ನ ಮುಪ್ಪಿನಲಿ ನಾ ಇರುವೆ
ನಿನ್ನಯ ಜೊತೆಯಲ್ಲಿ
ನಿನ್ನ ಸೇವೆಯ ಮಾಡಿ ನಿನ್ನೊಡನೆ ಬಾಳುವೆ
ನೀ ತೋರಿದ ದಾರಿದೀಪವೇ
ನನ್ನ ಬಾಳಿನ ನಂದಾದೀಪದಂತೆ
ಬದುಕು ಹುಡುಗಾಟವಲ್ಲ
ಬರಿ ಹುಡುಕಾಟ ಎಂಬ ನಾಣ್ಣುಡಿಯಂತೆ
ನಮ್ಮ ಕುಟುಂಬ ಸದಾ ಮಿನುಗುವ
ನಕ್ಷತ್ರದಂತೆ ನಗುತಿರಲಿ



**ಗಗನಾ ಎನ್ ಎಮ್**
7ನೆ ತರಗತಿ, 'ಡಿ' ವಿಭಾಗ

## ಅಮ್ಮ

ಜಗವನೇ ಮರೆಸುವ ಅದ್ಭುತ ಶಕ್ತಿ
ಇವಳಲ್ಲಿದೆ ಎಲ್ಲರಿಗೂ ಮುಕ್ತಿ
ಮಕ್ಕಳಿಗಾಗಿ ಧಾರೆ ಎರೆಯುವಳು ಯುಕ್ತಿ
ಪ್ರತಿಫಲ ಬಯಸದ ವೃಕ್ಷದಂತೆ
ನಿಸ್ವಾರ್ಥ ಸೇವಕಿ ಇವಳಂತೆ
ಏನು ಕಾಣಿಕೆ ನೀಡಿದರೂ ಸಾಲದಂತೆ
ಇವಳ ಋಣಕ್ಕೆ ಸರಿಸಾಟಿಯಿಲ್ಲವಂತೆ
ನಿನ್ನ ಗರ್ಭದಲ್ಲಿ ನನಗೆ ರೂಪವನ್ನು ನೀಡಿದೆ

ನಾಲ್ಕು ದಿಕ್ಕಿನ ದೇವರ ನೆನಸಿ
ಅತೀವ ನೋವನು ನೀ ಸಹಿಸಿ
ಈ ಲೋಕಕ್ಕೆ ನನ್ನ ನೀ ಕರೆತಂದೆ
ನಿನ್ನೆದೆಯ ಅಮೃತ ನನಗೆ ಕುಡಿಸಿ
ನೀ ಉಣ್ಣುವ ತುತ್ತನು ನನಗೆ ಉಣಿಸಿ
ಕಣ್ಣಿನ ರೆಪ್ಪೆಯು ನೀನಾದೆ
ಆ ಹುಣ್ಣಿಮೆಯ ಚಂದ್ರನಂತೆ ಬೆಳಕಾದೆ

ಮಳೆ ಚಳಿ ಎಂದರೆ ಮಡಿಲಲ್ಲಿ ಮಲಗಿಸಿ
ನಿನ್ನ ಸೆರಗನು ಹೊದಿಸಿದೆ
ಕಚಗುಳಿ ಇಡುತ ನನ್ನನು ನಗಿಸಿ
ಕಂದನ ಪಾಲಿಗೆ ದೇವರಾದೆ
ನೀ ಎಂದೂ ಬಾಡದ ಹೂವಾದೆ



**ಸಿಂಚನಾ**
10ನೆ ತರಗತಿ, 'ಸಿ' ವಿಭಾಗ

## ಇರುವೆ

ಇರುವೆ, ಇರುವೆ
ನೀನು ಸಣ್ಣ ಇರುವೆ ನಾನು ದಪ್ಪಕ್ಕಿರುವೆ.
ನಾನು ನಡೆದಾಗ ನೀನು ಬೀಳುವೆ
ನೀನು ನಡೆದಾಗ ನಾನು ನಿಲ್ಲುವೆ
ನೀನು ಕಮ್ಮಿ ತಿನ್ನುವೆ
ನಾನು ತುಂಬ ತಿನ್ನುವೆ
ನೀನು ಗೂಡಲ್ಲಿ ಇರುವೆ
ನಾನು ಮನೆಯಲ್ಲಿ ಇರುವೆ



**ಲಕ್ಷ್ಮೀ ಹೆಬ್ಬಾಳೆ ರಾಮ್**
5ನೆ ತರಗತಿ, 'ಬಿ' ವಿಭಾಗ

## ಅಚ್ಚರಿಯ ಚಂದಿರ

ಭೂಮಿಯಿಂದ ಸುಂದರ ಕಾಣುವ ಆ ಚಂದಿರ
ರಾತ್ರಿಯಾದರೆ ಸಾಕು ಭುವಿಯ ಬೆಳಗುವ
ಅಮ್ಮ ಲಾಲಿಯ ಹಾಡಲು
ನಮ್ಮನು ನೋಡಿ ನಗುತಿರುವ
ಗಗನದಲ್ಲಿ ಚೆಂಡಿನ ಹಾಗೆ
ಆ ಚಂದಿರ ಸದಾ ಇರುವ
ಆ ಚಂದಿರ ಒಂದು ಅಚ್ಚರಿ
ಚುಕ್ಕಿ ತಾರೆಗಳ ಮಧ್ಯೆ
ಒಮ್ಮೆ ನೋಡಿದರೆ ಅನಿಸುವುದು
ನೋಡಲು ಎರಡು ಕಣ್ಣು ಸಾಲದು
ಒಮ್ಮೆ ಕೆಂಪು, ಒಮ್ಮೆ ಬಿಳಿ,
ಮತ್ತೊಮ್ಮೆ ನೀಲಿ

ಇದೆಂತಹ ಅಚ್ಚರಿ ನೀವೇ ಹೇಳಿ
ವಿಜ್ಞಾನಿಗಳ ಗುಂಪಿನಿಂದ ಚಂದ್ರನ ಪರೀಕ್ಷೆ
ತಿಳಿಯದ ಎಲ್ಲಾ ಸತ್ಯ
ಯಾವಾಗ ತಿಳಿಯುವುದೊ
ಆ ಪರಮಾತ್ಮನಿಗೆ ತಿಳಿದಿದ್ದು



**ಶರಣ್ಯಾ ಎಂ ಸಿ**
5ನೆ ತರಗತಿ, 'ಎ' ವಿಭಾಗ

## ಹಕ್ಕಿ

ನಾನೊಂದು ಪುಟ್ಟ ಹಕ್ಕಿ
ತಿನ್ನುವೆನು ಕಾಳನು ಹೆಕ್ಕಿ

ನೋಡುವೆನು ಬಾನ ನಕ್ಷತ್ರ
ಹಾಡುವೆನು ಚೈತನ್ಯ ಉಕ್ಕಿ

ಊರೂರು ಸುತ್ತುವೆನು ನಾನು
ಸೇರಿ ಎಲ್ಲ ಬಳಗದವರನು

ಹಾಡುತ ಕುಣಿಯುತ ಬಾನಲ್ಲಿ
ಚಿಂತೆಯು ಇನ್ನು ನಮಗೆಲ್ಲಿ

ಹಾರಾಡುತ ನಾ ಸಂತಸದಲಿ
ಬರುವೆನು ಗೂಡಿಗೆ ರಾತ್ರಿಯಲಿ



**ಆರ್ಯಾ ಆರ್ ನಾಯರ್**
5ನೆ ತರಗತಿ, 'ಬಿ' ವಿಭಾಗ

## ಲೋಕದ ಕಣ್ಣು

ಹೂವಿನ ಹಾಗೆ ಅರಳುತ್ತದೆ
ಹೂವಿನ ಹಾಗೆ ಸುಂದರವಾಗಿ
ನೇಸರಾ ನೇಸರಾ ಬೆಳಕನ್ನು ತರುವ ನೇಸರ
ನಮ್ಮ ಬದುಕಿನ ನೇಸರಾ ನೇಸರಾ

ಅಮ್ಮನ ಆ ಸೊಗಸಾದ ಲಾಲಿ ಹಾಡು
ಆ ಪ್ರೀತಿಯ ಬೆಳದಿಂಗಳು
ಶಾಂತವಾಗಿರುವ ತೊರೆಯ ಸಮೀಪ
ಕತ್ತಲಲ್ಲಿ ಬೆಳಕಿನ ದೀಪದ ಹತ್ತಿರ

ಇಬ್ಬನಿ ತಬ್ಬಿದ ಇಳೆಯಲಿ
ರವಿತೇಜ ನಕ್ಕಿ ನಲಿಯುತಿಹುದು
ಹಾಡು ಹಕ್ಕಿಯ ಹಾಡು ಎಷ್ಟು ಇಂಪು
ಗಾಳಿ ಬೀಸಿ ಬೀಸಿ ಮಧು ಮಧುರ ಧ್ವನಿಯು
ಮೋಡ ನಾಚುತಿಹುದು ಆನಂದದಿಂದ ಸದಾನಂದದಿಂದ



**ಪೂರ್ವಿಕಾ ಕೆ ರಾಜ್**
5ನೆ ತರಗತಿ, 'ಎ' ವಿಭಾಗ

## ಕನ್ನಡ ನಮ್ಮ ನಾಡು ಕನ್ನಡ

ನಮ್ಮ ನಾಡು ಕನ್ನಡ
ನಮ್ಮ ಹೆಮ್ಮೆಯ ಕನ್ನಡ
ನಮ್ಮ ಭಾಷೆ ಕನ್ನಡ ॥

ನಮ್ಮ ತಾಯಿ ಕನ್ನಡ
ಬಣ್ಣದ ಕನಸ ನೀಡುವುದು ಕನ್ನಡ
ಕನ್ನಡ ನಮ್ಮ ನಾಡು ಕನ್ನಡ ॥

ಕನ್ನಡವೇ ಸತ್ಯವೂ
ಕನ್ನಡವೇ ನಿತ್ಯವೂ
ಕನ್ನಡ ನಮ್ಮ ನಾಡು ಕನ್ನಡ ॥

ಕನ್ನಡ ಮಾತನು ಆಡೋಣ
ಕನ್ನಡ ಹಾಡನು ಹಾಡೋಣ
ಕನ್ನಡ ನಮ್ಮ ನಾಡು ಕನ್ನಡ ॥



**ಮನಸ್ವಿ ಭಟ್ ವಿ**
5ನೆ ತರಗತಿ, 'ಡಿ' ವಿಭಾಗ

## ನಮ್ಮ ಎಕ್ಸೆಲ್ ಶಾಲೆ

ಬೃಂದಾವನದ ತರತರದ ಹೂಗಳ ಕಂಪಿನಲ್ಲಿ
ಹಸಿರು ಪರಿಸರದ ಒಡಲಿನಲ್ಲಿ
ಚಾಮುಂಡಿ ದೇವಿಯ ನೆರಳಿನಲ್ಲಿ
ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆ

ಕೊರತೆ ಇಲ್ಲದೆ ಸಾಗಿದೆ ಅಕ್ಷರಾಭ್ಯಾಸ
ಕಲಿಯುವವರ ಮನಕೆ ಹರ್ಷೋಲ್ಲಾಸ
ನಡೆ – ನುಡಿ ವಿನಯ ಆಭರಣ
ನಡೆಸುವ ಮಮತೆಯ ಮನದ ಗುಣ

ಬೀಜವೊಂದನು ನೆಟ್ಟರೆ ಆಗುವುದು ಮರ
ಆದರೆ ಅದರ ಅವಧಿ ಬಲುದೂರ
ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ನಾವು ಕಲಿತೀವಿ ಅಕ್ಷರಗಳ ಸರ
ಮಕ್ಕಳೆಲ್ಲರು ಅಕ್ಷರ ಸ್ವರಸರಗಳ ಸರಮಾಲೆಯ ಸರ



**ಎಂ ರಿತಿಶಾ**
5ನೆ ತರಗತಿ, 'ಡಿ' ವಿಭಾಗ

## ಮಳೆ

ಮಳೆ ಬಂತು ಮಳೆ
ಬಟ್ಟೆ ಎಲ್ಲ ಕೊಳೆ
ಅಲ್ಲಿ ಇಲ್ಲಿ ಓಡಿದರೆ
ಜಾರಿ ಬಿದ್ದು ಕೊಳೆ

ಮಳೆ ಬಂತು ಮಳೆ
ಬಿಸಿ ಬಿಸಿ ವಡೆ
ತಿಂದು ನೀನು ನಡೆ

ಮಳೆ ಬಂತು ಮಳೆ
ಶಾಲೆಗೆಲ್ಲ ರಜೆ
ಮನೆಯಲ್ಲಿ ಕುಳಿತು ನೀನು
ಪುಸ್ತಕವ ಬರೆ

ಮಳೆ ಬಂತು ಮಳೆ
ಬಾವಿ ತುಂಬಾ ಕೊಳೆ
ತುಂಬಿ ಹರಿವ ಹೊಳೆ

ಮಳೆ ಬಂತು ಮಳೆ
ಹೊಲಗದ್ದೆ ಬೆಳೆ
ಬೆಳೆ ಕಳೆ ಮಳೆ



**ಎ ಶ್ರೇಯಾ ಸಂತೋಷ್**
5ನೆ ತರಗತಿ, 'ಎ' ವಿಭಾಗ

## ಕನ್ನಡ

ಸತ್ಯ ನಿತ್ಯ ಕನ್ನಡ
ನಮ್ಮ ನುಡಿ ಕನ್ನಡ
ನುಡಿಯಬೇಕು ಕನ್ನಡ
ಕರ್ನಾಟಕವಿದು
ಮಾತಾಡಿರಿ ಕನ್ನಡ
ನಮ್ಮ ಕನ್ನಡ
ಬರ್ರಿ ನಮ್ಮ ಸಂಗಡ
ಮಾತಾಡಿ ಕನ್ನಡ



**ತನ್ವಿ ಗಿರೀಶ್**
5ನೆ ತರಗತಿ, 'ಎ' ವಿಭಾಗ

## ಮಳೆ

ಬಂತು ...ಬಂತು...ಮಳೆ ಬಂತು
ಅಂಗಳವೆಲ್ಲಾ ನೀರಾಯ್ತು
ಗೆಳೆಯರ ಸಂಗಡ ಸೇರಿ ಕುಣಿಯೋಣ
ಕಾಮನ ಬಿಲ್ಲನು ನೋಡೋಣ
ನವಿಲಿನ ನರ್ತನ ನೋಡೋಣ
ಹಸಿರಿನ ಸೌಂದರ್ಯ ಸವಿಯೋಣ
ಚಟಪಟ ಮಳೆಯಲಿ ಆಡೋಣ



**ಲಿಖಿತಾ ವೈ ಆರ್**
5ನೆ ತರಗತಿ, 'ಸಿ' ವಿಭಾಗ

## ನನ್ನ ಕನಸು

ನನ್ನ ಕನಸು ನನ್ನ ಕನಸು
ಕನಸಿನಲ್ಲಿ ಒಂದು ಕನಸು
ಕನಸಿನಲ್ಲಿ ಒಬ್ಬ ರಾಜ
ರಾಜನಿಗೊಬ್ಬಳು ಹೆಂಡತಿ
ಆ ರಾಜ ವಿಧಿವಶನಾದ
ರಾಜನ ಮಗ ರಾಜನಾದ
ರಾಜನಿಗೊಂದು ಪಟ್ಟಾಭಿಷೇಕ
ರಾಜನಿಗೆ ಲಗ್ನವಾಯಿತು
ಎದುರಾಳಿಗಳಿಂದ ವಿಷಯ ಬಂತು
ಸಜ್ಜಾಯಿತು ಸೇನೆಯು ರಣ ಕಹಳೆಯ ಊದಲು
ಎದುರಾಳಿಗಳು ರಣರಂಗದಲ್ಲಿ
ಶುರು ಮಾಡಲು ಯುದ್ಧ
ಹೋರಾಡಿದ ರಾಜನು
ರಣರಂಗದಲ್ಲಿ ಎದುರಾಳಿಗಳ
ಮಣಿಸಿದನು.



**ಎಂ ಡಿ ತನ್ಮಯ್**
5ನೆ ತರಗತಿ, 'ಬಿ' ವಿಭಾಗ

## ಮಳೆ

ಮಳೆ ಮಳೆ ಮಳೆ
ಸಿಡಿಲು ಜೊತೆ ಜಡಿ ಮಳೆ
ಮರಗಿಡಗಳಿಗೆ ಬಂತು ಕಳೆ
ಮಣ್ಣಿಗೆ ಬಂತು ಕೆಸರಿನ ಕೊಳೆ

ಮಳೆಯಿಂದ ಬಂತು ಒಳ್ಳೆಯ ಬೆಳೆ
ರೈತನ ಮುಖದಲ್ಲಿ ಮಂದಹಾಸದ ಕಳೆ
ಪ್ರಕೃತಿಯನ್ನು ಸದಾ ಹಸಿರಾಗಿಡುವ ಮಳೆ
ನನ್ನ ಅಚ್ಚುಮೆಚ್ಚಿನ ಜಡಿ ಮಳೆ



**ಜಸ್ವಿ ಎನ್**
5ನೆ ತರಗತಿ, 'ಬಿ' ವಿಭಾಗ

## ನಮ್ಮ ಕನ್ನಡ ನಾಡು

ನಾನು ಹಾಡಿದೆ ಈ ಹಾಡು
ಕರ್ನಾಟಕದಲ್ಲಿ ಮೈಸೂರು ನಗರ
ನಮ್ಮ ನಗರದ ಹಬ್ಬ ದಸರ
ಮೈಸೂರು ನಗರ ತುಂಬಾ ಚಂದ
ಅಲ್ಲಿರುವುದು ನನಗಾನಂದ



**ಅತ್ರೇಯಿ ಪೈ**
3ನೆ ತರಗತಿ, 'ಬಿ' ವಿಭಾಗ

## ಪಕ್ಷಿಗಳು

ಮುಗಿಲಿನಲ್ಲಿ ಹಾರಾಡುವ ಪಕ್ಷಿಗಳು
ಬಣ್ಣ ಬಣ್ಣದ ಸುಂದರ ಬಾನಾಡಿಗಳು
ಕೋಗಿಲೆಯ ಕುಹೂ ಕುಹೂ ಗಾನ
ನವಿಲಿನ ತಕ ಥೈ ನೃತ್ಯ
ಮರಕುಟಿಗದ ಟುಕು ಟುಕು ನಾದ
ಗಿಳಿಗಳ ಮಧುರ ಸ್ವರ
ಸುಂದರವಾದೀ ಪಕ್ಷಿ ಪ್ರಪಂಚ
ಅಕ್ಷಿಗಳಿಗೆ ರೋಮಾಂಚನ



**ಮಧುರಾ ಎ ಯು ಅತ್ರೇಯ**
3ನೆ ತರಗತಿ, 'ಬಿ' ವಿಭಾಗ

## ಹಿಮ

ಸೂರ್ಯನ ಕಿರಣಗಳಿಗೆ
ಸ್ಫಟಿಕದಂತೆ ಹೊಳೆಯುವ ಹಿಮವೇ
ನಿನ್ನೊಳಗೆ ಅಡಗಿರುವ ಅಂಶವೇ
ಜೀವರಾಶಿಗಳಿಗೆ ಉಡುಗೊರೆ
ಹಿಗ್ಗುತಾ ಜಿಗ್ಗುತಾ ನಾ
ನುಂಗುವೆನು ನಿನ್ನಲ್ಲಿರುವ ತೇವಾಂಶ
ರುಚಿಯೂ ಹೌದು ತಂಪೂ ಹೌದು
ಮನಸನು ಮುದಗೊಳಿಸುವ ಔಷಧಿಯೂ ಹೌದು
ಎಲ್ಲೆಲ್ಲಿ ನೋಡಿದರೂ ನಿನ್ನ
ವಂಶದವರೇ ನಲಿದಾಡುವರು
ನಿನಗೆ ನಾ ಚೆಂಡಿನ ಆಕಾರ ಕೊಡುವೆ
ಕುಣಿದು ನಲಿದು ನಾ ಆಡುವೆ ಸ್ನೇಹಿತರೊಡನೆ
ಮೈ ಕೊರೆಯುವ ಚಳಿ ಇದ್ದರೂ
ಮನವ ತೆರೆದು ಚಳಿಯ ಮರೆತು
ದೃಢಮನಸ್ಸಿನಿಂದ ನಿನ್ನನ್ನು ಏರಿ
ನಿನ್ನೊಡನೆ ಆಟವಾಡಲು ನಾ ಬರುವೆ



**ನಿಖಿಲ್ ಎಂ**
8ನೆ ತರಗತಿ, 'ಬಿ' ವಿಭಾಗ

## ಸಮಯ

ಈ ಸಮಯಕ್ಕೆ ನಿಲ್ಲಲು ಕೂರಲು ಗೊತ್ತಿಲ್ಲ
ಓಡುವುದಷ್ಟೆ ಅದರ ಕೆಲಸ
ನಾವು ಹೆಣ್ಣುಮಕ್ಕಳೇ ಹೀಗೆ
ಸಮಯದೊಂದಿಗೆ ಸರಸರ ಹೆಜ್ಜೆ ಹಾಕುತ್ತಿದ್ದೇವೆ
ಮೊನ್ನೆ ಮೊನ್ನೆ ಮೊಗ್ಗಾಗಿದ್ದ ನಾವು
ಅರಳುತ್ತಿದ್ದೇವೆ ಚೂರು ಮಾಡದಿರಿ
ಸಮಯ ಸರಿದಂತೆಲ್ಲಾ ಧ್ವನಿ ಪಕ್ವವಾಗುತ್ತಿದೆ
ಹಾಡುತ್ತೇವೆ ಕೊರಳ ಹಿಚುಕದಿರಿ
ಸಮಯ ಓಡಿದಂತೆಲ್ಲಾ ನಾವು ಕುಣಿಯುತ್ತೇವೆ
ನೆಲಡೊಂಕು ಮಾಡದಿರಿ
ಸಮಯದ ನೆಪ ಹೇಳಿ ನಮ್ಮ ಸುತ್ತ ಗೋಡೆ ಕಟ್ಟದ್ದೀರಿ
ಸಮಯದೊಂದಿಗೆ ನಮಗೆಷ್ಟು ಪಾತ್ರಗಳು
ಅಕ್ಕ ತಂಗಿ ಮಡದಿ ತಾಯಿ ಜೀವಂತಿಕೆಯ ಸೆಲೆಗಳು
ಎಲ್ಲಾ ಹೆಣ್ಣುಮಕ್ಕಳಿಗೂ ನಿರ್ಭಯ, ನಿರ್ಭೀತಿಯ
ನಾಳೆಗಳು ದಕ್ಕಲಿ ಸಮಯ ಓಡುತ್ತಲಿರಲಿ

**ಅನನ್ಯಾ ಎ ಡಿ**
8ನೆ ತರಗತಿ, 'ಬಿ' ವಿಭಾಗ





## ಉಳಿಸೆನ್ನನು ಉಳಿಯಲು

ಮೂಡಣದಿ ದಿನಕರನು ಅರಳುತಲಿರಲು
ಮನುಜರಲಿ ನವ ಚೇತನ ತುಂಬುತಲಿರಲು
ಕೋಗಿಲೆಯ ದನಿಯೊಂದು ಇಂಪಾಗಿ ಬರಲು
ಹಕ್ಕಿಗಳ ಕಲರವ ಮಧುರವಾಗಿರಲು
ಕೊಂಬೆಗಳನೆತ್ತುತ ಗಿಡಮರಗಳುಲಿಯುತಲಿರಲು
ತಂಗಾಳಿಯ ನಾದಕೆ ನಲಿದಾಡುತಲಿರಲು
ಮಡಿಕೆಗಳನೆತ್ತುತ ಹೆಂಗೆಳೆಯರಿರಲು
ನದಿಯ ಜುಳುಜುಳು ನಾದಕೆ ತಲೆದೂಗುತಿರಲು

ದಿನ ಉರುಳಿ ಹಕ್ಕಿಗಳು ನೆಲೆಯತ್ತ ಬರಲು
ತಮ್ಮ ನೆಲೆಯೇ ಕಾಣದೆ ಕಂಗೆಟ್ಟಿರಲು
ಹೆಂಗೆಳೆಯರು ಮಗದೊಮ್ಮೆ ನೀರಿಗಾಗಿ ಬರಲು
ತಿಳಿನೀರಿದ್ದಲ್ಲಿ ಕರಿ ಜಲಪಾತವಿರಲು

ಮಾನವನ ಸ್ವಾರ್ಥಕೆ ಪ್ರಕೃತಿ ಬಲಿಯಾಗಿರಲು
ಅಳಿವಿನ ಅಂಚಿಗೆ ಎಲ್ಲ ಜಾರುತಲಿರಲು
ಓ ದೇವ ನೀ ಬಂದು ಕಾಪಾಡು ಈ ಜನಕೆ
ಮತಿಯ ನೀಡು ಪ್ರಕೃತಿಯ ಉಳಿಸಲಿಕೆ



**ಅಪೂರ್ವಾ ಆರ್ ಭಟ್**
8ನೆ ತರಗತಿ, 'ಸಿ' ವಿಭಾಗ

## ಕನ್ನಡ

ಭಾಷೆಯಲ್ಲಿ ಅಂದದ ಭಾಷೆ
ಅದುವೆ ನಮ್ಮ ಕನ್ನಡ ಭಾಷೆ

ಇದ ನುಡಿಯಲು ನನ್ನ ನಾಲಿಗೆಗಾಸೆ
ಇದ ಸದಾ ಕೇಳಲು ನನ್ನ ಕಿವಿಗಳಿಗಾಸೆ

ಕನ್ನಡದ ಕೀರ್ತಿಯ ಬೆಳಗಿದ ಕವಿಗಳು
ನಮ್ಮ ಕನ್ನಡದ ಕಣ್ಮಣಿಗಳು
ಸಂಗೀತ ಸಾಹಿತ್ಯ ಕಲೆ
ಇವುಗಳಿಗೆಲ್ಲ ಕನ್ನಡವೆ ನೆಲೆ

ದ ರಾ ಬೇಂದ್ರೆ, ಕುವೆಂಪು, ಮಾಸ್ತಿ
ಇವರೆಲ್ಲಾ ನಮ್ಮ ಕನ್ನಡದ ಆಸ್ತಿ
ಸ್ನೇಹ ಪ್ರೀತಿಯ ಬಂಧ
ಕನ್ನಡವೆ ಅಂದ
ಚಂದದಲ್ಲಿ ಚಂದ
ಕನ್ನಡವೆ ಅಂದ

**ಆರ್ ಜೆ ಶ್ರೀರಕ್ಷಾ**
5ನೆ ತರಗತಿ, 'ಇ' ವಿಭಾಗ



## ದೀಪ

ಉರಿಯುವ ದೀಪ ಬದಲಿಸುವುದು
ಮನೆಯ ರೂಪ ಕೊಡುವುದು
ಮನೆಯ ತುಂಬಾ ಬೆಳಕು
ತೊಳೆಯುವುದು ಮನೆಯ ಕೊಳಕು
ದೀಪವು ತರುವುದು ಮನೆಗೆ ಲಕ್ಷಣ
ಪಡೆಯುವರು ಮಕ್ಕಳು ಇದರ ಮುಂದೆ ಶಿಕ್ಷಣ
ದೀಪ ಉರಿಯುವುದು ದೇವರ ಮುಂದೆ
ಅದನು ಉರಿಸಲು ನಮ್ಮ ಬೆವರಿದೆ ಹಿಂದೆ

ಉಪಯೋಗಿಸುವರು ದೀಪವನ್ನು ಬೇಕಾದಲ್ಲಿ
ಸಂಭ್ರಮ ಉತ್ಸವದ ಸಮಯದಲ್ಲಿ
ದೀಪವಿಲ್ಲದೆ ಹಬ್ಬದ ವಾತಾವರಣವಿಲ್ಲ
ದೀಪ ಉಪಯೋಗಿಸಬಾರದೆನ್ನಲು ಕಾರಣವಿಲ್ಲ

**ಆರ್ಯಾ ಪಿ ಹಂಪಿ**
8ನೆ ತರಗತಿ, 'ಬಿ' ವಿಭಾಗ



## ಅಮ್ಮ

ಅಮ್ಮ ನನ್ನ ಪ್ರೀತಿಯ ಅಮ್ಮ
ಪ್ರೀತಿಗೆ ಇರುವ ಒಂದೇ ಪದ ಅದು ಅಮ್ಮ
ಅಮ್ಮ ಮಕ್ಕಳಿಗೆ ತೋರಿಸುವ ಅಕ್ಕರೆ
ಮಕ್ಕಳಿಗೆಲ್ಲಾ ಅದು ಪ್ರೀತಿಯ ಸಕ್ಕರೆ

ಮಕ್ಕಳಿಗೆ ಹೇಳಿಕೊಡುವೆ ಬಾಳಿನ ನೀತಿ
ಅದೆ ತೋರಿಸುತ್ತದೆ ಮಕ್ಕಳ ಮೇಲೆ ಇರುವ ಪ್ರೀತಿ
ಬದುಕಿನ ದಾರಿಯಲ್ಲಿ ಕೈಹಿಡಿದು ನಡೆಸುವಳು
ತಪ್ಪಾದ ದಾರಿಯಲ್ಲಿ ನಡೆದರೆ ಸರಿ ದಾರಿ ತೋರಿಸುವಳು

ಮಕ್ಕಳು ಮಾಡಿದ್ದು ತಪ್ಪಾದರೆ ತಿದ್ದುವಳು
ಮಕ್ಕಳು ಮಾಡಿದ್ದು ಸರಿಯಾದರೆ ಹೊಗಳುವಳು
ಮಕ್ಕಳ ಬಾಳಿನ ಕನಸನ್ನು ನನಸು ಮಾಡಲು
ಸಹಾಯ ಮಾಡುವ ದೈವವೇ ಅಮ್ಮ

**ಸ್ಫೂರ್ತಿ ಕೆ ಎಸ್**
8ನೆ ತರಗತಿ, 'ಡಿ' ವಿಭಾಗ



## ಕನ್ನಡ ರಾಜ್ಯೋತ್ಸವ

ಬನ್ನಿ ಎಲ್ಲಾ ಆಚರಿಸೋಣ ರಾಜ್ಯೋತ್ಸವ
ಬನ್ನಿ ನೋಡೋಣ ಈ ನಿತ್ಯೋತ್ಸವ
ಬನ್ನಿ ಆಚರಿಸೋಣ ರಾಜ್ಯೋತ್ಸವ

ಭೇದಭಾವ ಕರ್ನಾಟಕದಲ್ಲಿಲ್ಲ
ಇಂಜಿನಿಯರ್ ಒಂದೇ ಕೆಲಸವಲ್ಲ
ಇಂಗ್ಲಿಷ್ ಮಾತನಾಡುವವರೆ ಎಲ್ಲ
ಕನ್ನಡದ ಇತಿಹಾಸ ಬಲ್ಲವರಿಲ್ಲ

ಸಂತರು ಗಾಯಕರು ಲೇಖಕರು
ನಾಡಿಗೆ ಹೆಮ್ಮೆ ತಂದ ಸಾಧಕರು
ಇದನ್ನು ನೋಡಿ ಹೆಮ್ಮೆಪಟ್ಟರು
ನಮ್ಮ ಯುವ ಬಾಲಕರು

ಪ್ರತಿ ಘಳಿಗೆಯು ನಿತ್ಯೋತ್ಸವ
ಬನ್ನಿ ಆಚರಿಸೋಣ ರಾಜ್ಯೋತ್ಸವ

**ಹರ್ಷಿತಾ ಬಿ ಎಂ**
8ನೆ ತರಗತಿ, 'ಸಿ' ವಿಭಾಗ



## ಕನ್ನಡ ನಾಡು

ಕನ್ನಡ ನಾಡು ಚೆಂದ
ಕನ್ನಡ ಭಾಷೆ ಚೆಂದ
ಅಪ್ಪ ಅಮ್ಮ ದೇವರೆಂದ
ನನ್ನ ಜೀವನ ಅವರಿಂದ
ಬದುಕು ಕಲಿತೆ ಕನ್ನಡ ನಾಡಿನಿಂದ
ನಮಿಸುವೆ ನಾ ಅಭಿಮಾನದಿಂದ

**ನಿಹಾರ್ ಡಿ ಶಾಸ್ತ್ರಿ**
8ನೆ ತರಗತಿ, 'ಸಿ' ವಿಭಾಗ



## ನಾನು ಯಾರು?

ನಾನು ತರತರದ ಬಣ್ಣಗಳಲ್ಲಿ ಬರುತ್ತೇನೆ.
ನಾನು ಒಂದು ಕೀಟ.
ನನ್ನ ಹತ್ತಿರ ಸುಂದರವಾದ ರೆಕ್ಕೆ ಇದೆ.
ನಾನು ಹೂವಿನ ರಸವನ್ನು ಕುಡಿಯುತ್ತೇನೆ.
ನೀವು ನನ್ನನ್ನು ಎಲ್ಲಾ ಕಡೆ ನೋಡಿರುವಿರಿ.
ಹಾಗಾದರೆ ನಾನು ಯಾರು?

**ಹೃದ್ಯಾ ಎಸ್ ದೀಕ್ಷಿತ್**
4ನೆ ತರಗತಿ, 'ಎ' ವಿಭಾಗ



## ಬಣ್ಣದ ಚಿಟ್ಟೆ

ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಕೆಂಪು, ನೀಲಿ, ಹಳದಿ ಚಿಟ್ಟೆ
ಹೂವಿಂದ ಹೂವಿಗೆ ಹಾರುವ ಚಿಟ್ಟೆ
ಹೂವಲ್ಲಿ ಏನನು ಹೇಳುತ್ತಿರುವೆ ಚಿಟ್ಟೆ
ನೀನು ಹೇಗೆ ಆದೆ ಚಿಟ್ಟೆ
ಅಂದದ ಚೆಂದದ ಬಣ್ಣದ ಚಿಟ್ಟೆ
ನನಗೆ ಇಷ್ಟ ನೋಡಲು ಚಿಟ್ಟೆ
ಹಾರಲು ಇಷ್ಟ ನಿನ್ನ ಹಾಗೆ ಚಿಟ್ಟೆ

**ಆದ್ಯಾ ಎಸ್ ಕೆ**
4ನೆ ತರಗತಿ, 'ಈ' ವಿಭಾಗ



(Affiliated to CBSE, New Delhi-Affl. No: 830385)
**# 40-P-1, Koorgalli Industrial Area Belavadi Post, Mysuru - 570018 Phone : (0821) 3981800, 3981801 Fax : 0821-3981802**
Web : www.excelpublicschool.com Email eps@excelindia.com epsoffice@excelindia.com